I beg to lay on the Table of the House Rules made under section 14 of the Mysore Legislature Salaries Ordinance, 1956.

(i) the Mysore Legislature Salaries of Members Rules, 1956;

(ii) the rule regarding members election to have fully furnished accommodation at the place of the meeting.

(iii) the rule regarding the disbursement of travelling and daily allowances to the Members of the Legislature at the close of each session.

MEMBERS' REPRESENTATION

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಒಂದು ವಿಚಾರ ಹೇಳಬೇಕಾಗಿದೆ. ನಮಗೆ ನಿನ್ನೆಯ ದಿವಸ ಕೊಟ್ಟಿರುವ ವಿಧಾನ ಸೌಧ ಇನ್‌ಕ್ವಾಯರಿ ಕಮಿಟಿಯ ವರದಿಯ ಮೇಲೆ Strictly Confidential ಎಂದು ಬರೆದಿದೆ. ಆದರೆ ಇದಕ್ಕೂ ಮುಂಚಿತವಾಗಿಯೇ ಪೇಪರುಗಳಲ್ಲಿ ಅದರ ಬಗ್ಗೆ ಟೀಕೆ ಟಿಪ್ಪಣಿಗಳು ಬಂದಿವೆ. ಬರಿಯ ಮೆಂಬರುಗಳಿಗೆ ಮಾತ್ರ ಇದು ಕಾನ್‌ಫಿಡೆನ್ಷಿಯಲ್ ಆಗಿದೆಯೇ ಹೇಗೆ ಎಂಬುದನ್ನು ತಿಳಿಸುವಿರಾ ?

ಅಧ್ಯಕ್ಷರು.—ಮೊದಲು ಅದು Confidential ಇತ್ತು; ಈಗ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಬಜೆಟ್ ವಿಚಾರದಲ್ಲಿ ಒಂದು ವಿಷಯವನ್ನು ಕೇಳಿಕೊಳ್ಳಬೇಕಾಗಿದೆ. ಹಣ ಕಾಸಿನ ಮಂತ್ರಿಯವರು ಒಂದು ಸ್ಟೇಟ್‌ಮೆಂಟನ್ನು ರಾಜ್ಯದ ಸ್ಥಿತಿಗತಿ ಏನು, ಸಾಲ ಲೇವಾದೇವಿ ಜವಾಬುದಾರಿ ಎಷ್ಟು ಎಂಬ ವಿವರದ ಪಟ್ಟಿಯನ್ನು ಎಲ್ಲ ಸದಸ್ಯರಿಗೆ ಕೊಡುತ್ತೇವೆಂದು ಹೇಳಿದ್ದರು ಮತ್ತು ಹೋದನಲ ಒಪ್ಪಿಕೊಂಡಿದ್ದರು. ಈ ಸಾರಿ ಅದನ್ನು ಕೊಟ್ಟಿಲ್ಲ, ಆದಕಾರಣ ಈ ಬಜೆಟ್ ವಿಷಯವನ್ನು ತಿಳಿದು ಕೊಳ್ಳಲು ಬರದಂತೆ ಆಗಿದೆ.

ಅಧ್ಯಕ್ಷರು.—ಹೋದನಲಹಾಗೆ ಒಂದು ಪಟ್ಟಿಯನ್ನು ಕೊಡಬೇಕೆಂದು ನಾನು ಕೇಳಿಕೊಂಡಿದ್ದು ನಿಜ. ಈಗ ಅದನ್ನು ಕೊಡಲು ಸಾಧ್ಯವಿಲ್ಲವೆಂದು ಮಂತ್ರಿಯವರು ಉತ್ತರದಲ್ಲಿ ಹೇಳಿದ್ದಾರೆ. ಈ ವಿಷಯದ ಮಾಹಿತಿ ಇರುವ ಒಂದು ವಿವರ ಪಟ್ಟಿಯನ್ನು ಕೊಡಬೇಕೆಂದು ಮತ್ತೆ ಕೇಳುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಈಗ ಅದೇ ಪ್ರಕಾರ ಕೊಡುತ್ತಾರೆಯೇ ?

ಅಧ್ಯಕ್ಷರು.—ಮುಖ್ಯ ಬಜೆಟ್ಟು ಸಭೆಯ ಮುಂದೆ ಬಂದಾಗ ಕೊಡುತ್ತಾರೆ. ಈಗ assets and liabilities ಎಷ್ಟು ? ಈಗ ಯಾವ ಯಾವುದು ಎಷ್ಟೆಷ್ಟು ಆಗಿದೆ—ಇಷ್ಟು ಮಾಹಿತಿ ಪೂರೈಸಿದರೆ ಕೆಲಸವಾಗುವುದು ಅದನ್ನು ಕೊಡಬೇಕೆಂದು ನಾನು ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

BUDGET FOR 1957-58

Demands for grants "on Account"

DEMAND NO. 2—LAND REVENUE.

7. *Land Revenue:*

Mr. SPEAKER.—Motion moved:

"That a sum not exceeding Rs. 49,50,000 be granted 'on account' to the Government to defray the charges which will come in course of payment during the period from 1st April 1957 to end of 31st day of July 1957 in respect of 'Land Revenue'."

Sri J. MOHAMED IMAM (Jagalur).—Sir, I want to know the procedure to be adopted today.

Mr. SPEAKER.—As all the Hon'ble Members know, the budget for the whole year is presented before the House but we are at present concerned with the Vote 'on Account' for 4 months. It would be better for us to confine ourselves to the Vote 'on Account' expenditure for the coming four months. So, the procedure in this regard is that speeches are not made at all or if at all they are made they should be short and confined to general remarks. I request the Hon'ble Members to be as brief as possible and not to refer to the whole Budget. Incidentally they may refer to the Budget, but, as we are concerned only with the account for the coming four months it is much better if the Hon'ble Members confine to the discussion of four months' account.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಶ್ವೇತ ಪತ್ರಿಕೆಯ ಮೇಲೆ ಸಾಮಾನ್ಯ ಚರ್ಚೆ ನಡೆಯಬಹುದೇ ? ಅಥವಾ ಹಣ ಕಾಸಿನ ಬಗ್ಗೆ ಜನರಲ್ ರಿಮಾರ್ಕ್ಸ್ ಮಾಡಲು ಅವಕಾಶವಿರುವುದೇ ?

Mr. SPEAKER.—Of course, the White Paper is also before the House. The Hon'ble Members may make their remarks on that also. As I have just now said, the whole Budget is before the House but we are concerned with only the Vote on Account.

*Sri J. MOHAMED IMAM.—Sir, if you permit me I want to make a few observations not only on the Budget but on other matters also. Sir, it is with a feeling of gratitude that I am taking part in the discussion on the Budget

(SRI J. MOHAMED IMAM.)

on this occasion, knowing full well that this will be the last occasion I am doing so. Ever since democracy was ushered in . . . .

SRI H. S. RUDRAPPA (Minister for Agriculture).—The Hon'ble Member is promoted, Sir?

SRI J. MOHAMED IMAM:—I would say rather, I was kicked out.

I have taken part, Sir, in the Budget discussion and I have opened the discussion on the Budget, I think for the last ten years and now I know I am leaving the finances of the State in a very unsatisfactory state; and it is a matter of deep concern to me that in spite of repeated efforts by myself and the members of the Opposition on this side, the financial condition of the State still remains deplorable and I am afraid it is going to become more deplorable.

Sir, we are just out of the grip of a cruel election. You know, Sir, how cruel the present day elections are and what an ordeal it is to the candidates, specially to those who have to fight against a mighty organisation which is backed up with power and money. Sir, I must say that the elections have been specially cruel to the Members of the Opposition. They have to fight against odds, against power, against money, against illicit distillation and various other practices. I know, Sir, in my opinion the elections in India are the most difficult and I do not think elections of such vast magnitude and so difficult can be found in any other country. Whatever may be the cause, Sir, I am very sorry and it is with great regret that many of my colleagues who worked with me and who contributed a great deal to the debate in this House, will not continue in this House, at any rate, till the next General Elections. I know, Sir, all my colleagues on this side were guided by the highest of motives. They were guided by the love of the country. They never asked anything in return and if they are defeated and if they are not in this House, it is not their fault. The loss is not theirs, but that of the country. Anyhow, Sir, I take this opportunity to say that all my colleagues on this side of Opposition stood solidly behind me. It is true that now and then some people were wooed by the other side and they crossed the floor. I know such a thing will not happen in future. But this much I can say, Sir, that all those Members who formed the Opposition, did their very best without fear or favour to serve the country, to set right the administration and to lead the Government along the right path. I take this opportunity to thank all of them.

At the same time, I will be failing in my duty if I did not refer to the Members of the Treasury Bench. Sir, we were anxious to set up a tradition in this House. We knew that a healthy Opposition was essential and greatly needed for the proper working of democracy; and I must say that both sides have worked in a spirit of sportsmanship. We have criticised each other bitterly many a time and we have fallen out, specially myself and Sri T. Mariappa. But still our personal relationship has remained unimpaired. Sir, I know that I enjoyed the confidence of many Members of the Treasury Bench much more than any other.

SRI T. MARIAPPA (Minister for Finance).—Even now.

SRI J. MOHAMED IMAM.—We acted like members of the same family and they have never misunderstood me and I have never misuderstood them. Sir, since I assumed the role of the Leader of the Oppossition, I think there has been quick succession of changes in the leadership of the Treasury Bench. I think I had to face four Chief Ministers and a number of other Ministers also. Firstly Sri K. C. Reddy; he was succeeded by Sri K. Hanumanthaiya; and he was succeeded by Sri Kadidal Manjappa and last came Sri Nijalingappa. It is a matter of pride for us that though there have been frequent changes in leadership of the Treasury Benches, on the side of the opposition, the leadership has remained the same and never changed from the beginning till the end (*Laughter*). That shows that when the Opposition comes to power—I am sure that after

the next General Elections it will come to power—there will not be such frequent changes and there will be stability of Government and stability of administration.

Sir, I am glad that the present members of the Opposition are going to be replaced by a still bigger body. I think about 55 members are entering the House who are not connected with the Treasury Bench. I am sure that all of them will form a well-knit Opposition. I am also sure that they will play their part worthily and keep up the traditions and conventions which we have established. I am also confident that this time the number of Opposition members will not dwindle as it did last time. Many of them, I know, are such as can very well defy the attractions or the wooings from the other side.

Sir, as circumstances have ordained, the Congress has the majority. They are going to shoulder the responsibility for administration of the country once again. I will not grudge it. In fact, I wish them very good future. I am only anxious that whatever may be the Government that might be formed, it should be formed in such a way as to confer ever lasting benefits on the country. I know, Sir, now there has been a good deal of feverish activity in the selection of the Leader.

Sri S. NIJALINGAPPA (Chief Minister).—No feverish activity.

Sri J. MOHAMED IMAM.—That fever will come in course of time. I know we on this side have no hand in that.

What I am anxious about is, that there should not be a repetition of what happened during the last five years in the coming five years. In the interests of the State and the people and in the interests of a sound and stable administration, we do wish that a stable Government must be formed. Not only should the Ministry be stable but it should also be competent and prove itself worthy of the trust that has been reposed in it by the electorate. I think it was the eminent philosopher Aristotle who said about 2000 years ago that a good Government is a Government which confers benefits on the people and which is guided by the highest motive of patriotism. It is only such a Government which will be blessed by the people.

Now, monarchy, it is said, is out of date. But I must say that the names of many monarchs remain immortal because they were benevolent monarchs and the good that they conferred on the people is even now remembered by the people. Even a benevolent monarchy will become absolutely unpopular if the monarch misbehaves. Similar is the case with democarcy. If democracy is selflessly and properly worked it will certainly confer benefits on the people, but if it is worked selfishly and if it is misused for personal gains, then I am afraid even demoeracy will become mobocracy. Unless the people who are in charge of democracy are guided by the highest and the noblest ideals, it is better that democracy is scrapped. After all, democracy is not an end in itself. It is only a means to an end and that end is to serve the State to the best of one's ability. Our concept of democracy is that it affords an opportunity to the people to play their noble part in serving the people. That part must be played worthily, selflessly and in the interests of the State. If these ideals are nourished and cherished by the future administration, the people will bless the administration and the administration will justify the trust reposed by the people in it.

On this occasion, Sir, I want to refer briefly to the Budget of this State. As pointed out by you, Sir, I shall not go into details, but, Sir, this much is certain that the finances of our State are very unsatisfactory. Our deficit is mounting up. The deficit revealed by the Budget is about Rs. 12 crores, *i.e.*, about Rs. one crore a month as against Rs. one crore a day in the Central Budget. This Budget does not reveal the actual state of affairs of our State. The figures shown are only more or less approximate, if not imaginary, and it is quite possible that the deficit may be still higher than what is shown. We are not aware of the actual debt position of the State.

(SRI J. MOHAMED IMAM.)

We do not know what exactly will be our liability. I am afraid I must give a warning to the people who are going to take charge of the administration that in course of time half of our normal revenue will be taken up for debt services. It is at present Rs. five crores before deducting some of the recoveries, but, after some time, say five years, a substantial portion of our normal revenue will be taken away for debt services, including interest on loans and sinking fund and there will be very little left thereafter. This deficit has caught hold of our State like a dragon. It has taken a firm grip on the administration. I am sure that in course of time this dragon of deficit will entirely swallow the administration. Even taking the present figures, the Finance Secretary anticipates an income of Rs. 49 crores and an overall expenditure, including the expenditure outside the revenue accounts, of Rs. 91 crores. According to the figures that he has given, the uncovered gap will be about Rs. 41 crores. It is said that this amount has to be found through Central assistance, borrowings and other means. Rs. 41 crores is not a small sum. Even assuming that this sum of Rs. 41 crores is the correct figure, I do not know how this amount is going to be reimbursed.

Obviously, there are only three ways of covering this gap, namely, taxation, borrowings and Central assistance. We are not sure as to how much will be the Central assistance. As it is, we are already indebted to the Centre to the extent of about Rs. 30 to 35 crores. Nobody is sure, not even the Chief Minister or the Finance Minister, as to how much of the central assistance will be by way of grants and how much will be by way of borrowing from the Centre.

Sri T. MARIAPPA.—We will be able to know it by next month.

Sri J. MOHAMED IMAM.—I must give a warning to the Finance Minister that indiscriminate borrowing will have very serious repercussion on the finances of the State and the country. As it is, for the old Mysore State, our debt position including the unfunded debts, comes to Rs. 80 crores. I do not know how much it will be in the bigger State of Mysore. In the old Mysore State we were paying more than Rs. 2 crores towards our debt services. In the new Mysore State it will come to Rs. five crores and odd before recoveries. So, if we go on borrowing, we will have to set apart from our normal revenues more and more funds towards interest charges and sinking fund. The normal revenue for the old Mysore State was Rs. 18 crores. For the new Mysore State perhaps it will be about Rs. 50 crores. If this amount of Rs. 41 crores which is left uncovered is to be found by borrowing, we will have to find more than Rs. two crores from the normal revenues of the State for interest charges alone. If we go on borrowing like this, then after five or ten years the entire revenue of the State will be consumed towards satisfying debt services only. So, this borrowing without knowing the nature of our finances and without knowing how much our revenues could stand is really a very unsound policy. Sir, a sound financial policy lays down that only a certain percentage of the total revenue should be set apart for the debt services. Also, a limit is laid down for borrowing. I am quite sure that only 20 per cent of the revenue should be set apart and the debt services should not exceed that amount. If you go on borrowing and borrowing every year, I am afraid a day will come when we will have no money to pay your servants.

1-30 P.M.

Then, Sir, taxation. For everything taxation, taxation. The Central Government levies taxes and the local Government also levies taxes. The sword of Damocles is always there hanging over the head of the common man. Sir, we have been consistently and repeatedly opposing the levy of fresh taxation. Since the advent of Democracy, I think, more than 35 items of taxation have been imposed on the people. We have been repeatedly urging upon the Government to think of the earning and paying capacity of the common man before taxes are

levied. But, taxes are being levied without paying any attention to this aspect of the matter. Sir, I am nervous of the future. People are very nervous of their future. They do not know when and to what extent they would be taxed.

Again, Sir, in the name of the Second Five-Year Plan anything is being done. Great injustice is being done to the country. What is this Second Five-Year Plan, Sir? This is a Plan which is intended to be implemented without funds. For the former Mysore State it was 90 crores and for the new State of Mysore it is 150 crores. But, the resources of the State are such that they are not able to contribute even two crores to implement that plan. According to the statement of the former Mysore State, it was disclosed that they could contribute only one crore towards the implementation of the plan costing 90 crores. We all know that the State of Mysore is a deficit State. Such being the case, how can the Plan be implemented? It could only be done by either Central aid or by borrowing. Government must work out and find out the resources. They must have a clean picture before them before they venture to implement such plans.

Sir, I do not want to go into the details of the Budget, except referring to one or two features. Now, Karnataka State is formed. I must give the credit to the present Ministry and the present Legislature of having carved out a big State. This Legislature will be remembered for ever as the pioneer in having brought about the Karnataka State. Sir, this new State has its own problems; many fresh problems have arisen and they will have to be solved. I admire two things—the unification of Karnataka and the nationalisation of the Gold Mines. But, many other problems remain to be solved.

Sir, my friend was referring to the holding of elections to the District Boards. That is a thorny question and if anybody is responsible for the delay in holding elections to the District Boards, it is the Government. We, on the opposite side, gave them sane and serious advice. But, they committed mistake after mistake, so much so they are now in a mess and do not know how to get out of it. Sir, according to the present Act, they have to hold elections on the basis of adult franchise. You know, Sir, what adult franchise means and how costly it is. If elections to District Boards are to be held on the basis of adult franchise, who should meet the huge cost? Normally, Government says, the District Boards should meet the cost. But, all our District Boards are financially helpless. For the elections on adult franchise each District Board will have at least to spend one or two lakhs. That is why, in the earlier stages, we recommended to have elections on indirect system. If it is on indirect system, the cost would be less. True, there may be corruption; there may be undesirable influence. But, still, that would be much better, under the circumstances, than the adult franchise system. Or, the best course to get out of the trouble would be to go back to the good old system, though it may look undemocratic, *i.e.*, to confine the electorate to the rate-payers. Government may not agree to this proposition. The Government, specially the Chief Minister, should chack out a policy as to what to do.

Sir, the other point to which I want to refer is the problem of Shanbhogues and Patels, which remains still to be solved. You know, Sir, that very recently the Shanbhogues and Patels have gone on strike.

(Sri T. A. Pai and the Chief Minister were taking)

Sir, I claim the ears of the Chief Minister on this aspect.

I raise a point of order, Sir. Can an Hon'ble member sit by the side of the Minister and talk to him and interrupt him from listening to the speeches of the Members?

Mr. SPEAKER.—There is no point of order in it.

Sri S. NIJALINGAPPA.—May I intervene, Sir? Government has got a number of ears. (*Laughter*).

Sri T. MARIAPPA.—Sir, I am very carefully following the Hon'ble Member Sri Imam.

Sri J. MOHAMED IMAM.—Sir, I was referring to the strike of the Village Officers. They are fighting for their rights and status. They have now gone on strike and the revenue collections have been suspended by most of them. I want to know what steps have been taken by Government to implement their demands? The Village Officers in Mysore are in a very unhappy position. They are paid only allowances, unlike the Village Officers of the neighbouring areas like the State of Madras. In Madras, Village Officers are being paid every month. In fact, in Bellary District it is so. I think this is the case in Bombay also.

Mr. SPEAKER.—Patils or Vatanadars are not paid; they get *potige*. Only Shanbhogues and Tallaries get their regular pay.

Sri J. MOHAMED IMAM.—There is no such thing here. They get only *potige*; Tallaries get nothing.

Sri M. P. PATIL (Minister for Revenue).—They have got inam lands.

Sri J. MOHAMED IMAM.—I am afraid, Sir, it is not always the case. In my district, Toties depend on the *Mirase*. The main duty of these Toties and Talaries is to help in the collection of land revenue; that is Government work. For the Government work they do, they are expected to go to the raiyats and get their emoluments. This is quite inconsistent and unfair. The Patels and Shanbhogues do not know whether they are Government servants or otherwise. They had previously the privilege and right to take part in elections and sit in legislative bodies on the ground that they were not Government servants and were working only on commission basis. Now, that privilege is denied. They are supposed to be full Government servants and it is held that they are holding offices of profit. So, Sir, it must be decided whether they are full Government servants or only commission agents. If they are not Government servants, they must be allowed to contest in elections and to take part in the administration. If you consider them as full Government servants, you must give them full emoluments as you give to other Government servants. They have now gone on strike and Government has not taken this House into confidence as to how this problem is going to be solved by them. We are anxious that this question should be settled. What is more, it must be solved satisfactorily to all. It is true, Sir, that it may cost more to the Government. But if, everything is worked judiciously, I think, the cost would not be more. I suggest that a small committee may be appointed to go into the question and solve this problem. Sir, many of these Patels and Shanbhogues have represented that they are prepared to resign their offices provided Government pays sufficient compensation. Even this aspect may be considered.

Sir, Government, it is true, have revised the pay of the low paid employees of the State. This has been received with mixed feelings. There are some who are immensely satisfied, but there are certain classes of officials who feel that the reorganisation has not helped them to a material extent. Many have come to me and represented that the revision has not at all helped them. Sir, Sri Kadidal Manjappa, when he was the Chief Minister, increased the salaries of the officials by 10 per cent. I understand that most of the officials were satisfied because this was more equitable and all got uniform rise in their pay. But, under the present new scales many officials are not materially benefited. I appeal to the Chief Minister and the Finance Minister to go into the question and to find out what class of officials has not been benefited by the revision and to remedy this defect.

Sir, I do not want to take much time but would deal with one or two aspects. During the last 10 years we have spent a good deal of money. Crores and crores of rupees have been spent. I do not deny, some material benefits have been conferred on the State. Some irrigation works were started and completed. There is considerable extension of electricity throughout the State. The number of schools has

increased. But, all this has been done at a considerable cost and there has been a good deal of wastage. There has been a good deal of almost pilferage also. Recently, Sir, the Vidhana Soudha Committee Report was in our hands. The Committee has rightly or wrongly stated how money is being wasted. This may be taken as an indication of all other major works also. Sir, I do submit that in such major works, estimates are being prepared indiscriminately; I do submit that works are executed in advance of the sanction of the estimates; I do submit that accounts are not properly checked and it must be admitted that supervision also is very slack. The Committee has held the Chief Minister and others responsible for this wasteful expenditure.

Sir, as a democratic Leader of the Opposition, I must hold responsible not only the Chief Minister but all those who voted the money into his hand, who approved all his plans and designs. It is not merely the Chief Minister Sri Hanumanthaiya who must be held responsible but his entire Cabinet must be held responsible as also the members who voted the money into his hands. The Opposition Party had been consistently opposing all those demands.

Sri T. MARIAPPA.—The hon'ble leader of the opposition had kept quiet at that time.

Sri J. MOHAMED IMAM.—Every time we have opposed the Appropriation Bill and we have opposed the grants. If the Members on the other side had prevented the person from going headlong and if the Cabinet colleagues had checked him, there would have been no calamity. In my opinion, it is not merely Sri K. Hanumanthaiya who has to be held responsible but all his erstwhile colleagues who were with him till the end. I know many Hon'ble Members were taking pride in looking at this Vidhana Soudha; but of late the same members have begun to condemn it. Under democratic principle, there is joint responsibility and collective responsibility. This responsibility cannot be thrust on a single person. After all he was your representative; he was working in a Cabinet which was under a joint responsibility. It is a matter to be investigated as to how far the Chief Minister and his colleagues are responsible for this huge expenditure.

Sometimes, Sir, I look at this building with a mixed feeling. Sometimes I feel that if these two crores of rupees had been spent on wells and other productive things, we would have conferred great amenities on the people. Year by year they have wasted crores of rupees without achieving anything tangible. When we left the administration, we handed over 36 crores of rupees to Sri T.Mariappa; all that reserve fund has disappeared. Every year crores and crores of rupees have been disappearing.

AN HON'BLE MEMBER.—It is an old story.

Sri J. MOHAMED IMAM.—This expenditure—has it produced anything tangible or concrete? No. Sometimes, I feel that atleast these 2 crores on Vidhana Soudha, however ill-spent, is locked up here and there is something substantial. Otherwise these two crores also would have disappeared along with the 36 crores.

Whatever it is, it is a lesson for the future. As I said before, democracy is not an end in itself, it is a means to an end and that end is sound administration, which would confer benefits on the people. This Vidhana Soudha is a sufficient example of the extravagance of Congress administration from the very beginning to the end and in spite of our repeated warnings, you have not heeded to us. Today, I may give you 50 crores; tomorrow, it will disappear. You do not know what a balanced budget is. You have landed this State into a hopeless deficit. Deficit financing has been resorted to which has brought about a rise in prices of commodities. In the course of a few years, there will be a revolution in the State. We know the plight of the common man. It is such an irresponsible expenditure, that Government did not care to look into the resources or revenue. It was only interested in spending, in increasing the expenditure, in increasing the cost of administration, but the Government never thought

(SRI J. MOHAMED IMAM.)

of a sound Administration. Myself and Sri Pattabhiraman have been urging times without number that the cost of administration must be brought down, that there must be economy, but, on the other hand, Government erred on the other side and went on increasing the staff and the establishment. So much so, a day will come when the last straw would break the camel's back. This is the problem which has to be tackled and which has to be tackled by a good Government. A good Government can be achieved only by national harmony, by understanding and by co-operation. I hope that such a Government would be accomplished in the next few years.

I would like to take this opportunity to thank the various Chief Ministers and the members of the Treasury Benches for the courtesy they have always shown me. In spite of serious differences the Chief Ministers, Sri K. Hanumanthaiya, Sri Kadidal Manjappa and Sri Nijalingappa have always been courteous and accommodative towards me. I believe that Sri Hanumanthaiya, in important measures and matters, used to take the Opposition into confidence, like the measures dealing with nationalisation of gold mines etc. Whatever it might be, the members of the Treasury Benches have never misunderstood me and I have never misunderstood them. Outside, they have been my very good friends.

A VOICE.—Why not inside ?

Sri J. MOHAMED IMAM.—Inside there may be passions and prejudices. All of us have been friends right from the beginning. For example, Sri Mariappa and I worked together.

Sri T. MARIAPPA.—Then, why go away ?

Sri J. MOHAMED IMAM.—I think I have to explain that point. I wanted to fill a place, where there will be greater activities. I must state that the Government of Mysore at present is becoming a glorified District Board, with no finances, no resources and always depending on the Centre. I have always been asked why the Mysore State has become a 'pensioner' State of the Central Government, dependent on it. I am therefore going to the Parliament to help the State of Mysore and the people of Mysore. I will, in my own humble way, fight with the Central Government and see that more and more assistance is given. Every important project, whether it be railway expansion or major irrigation or hydro-electric works, has to be undertaken through Central assistance. I do not know how I would fare there, but I feel that, being in the Parliament, I would be of more assistance to the State of Mysore and that I could fight for the State of Mysore there. Because, when I am there I will not be a party-man and I would think of Mysore and Mysore alone. Towards this task, I hope I will have your blessings.

In conclusion I would like to thank the members on this side. I know many of them would not be here soon. Their not being here is not a loss to them, but a loss to the country. The country will realise it soon. Their loss would be truly great.

I would also thank the Chair for the uniform courtesy and kindness shown to me. I once again promise that I will do my best to help the State of Mysore.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).— ಮಾನ್ಯ ಅಧ್ಯಕ್ಷರೇ, ಈಗ ನಭೆಯ ಮುಂದೆ ಮತ್ತೊಂದು ಆಯವ್ಯಯ ಪಟ್ಟಿಯನ್ನು ಹಣಕಾಸಿನ ಸಚಿವರು ಮಂಡಿಸಿದ್ದಾರೆ. ಇದು ಒಂದು ವರ್ಷಕ್ಕೆ ಸಂಬಂಧಪಟ್ಟ ಆಯವ್ಯಯ ಪಟ್ಟಿಯಾಗಿದ್ದರೂ ಕೂಡ ನಾಲ್ಕು ತಿಂಗಳಿಗೆ ಮಾತ್ರ ಹಣದ ವೆಚ್ಚಕ್ಕಾಗಿ ಒಪ್ಪಿಗೆಗೆ ತಂದಿದ್ದಾರೆ. ಈ ಸಂದರ್ಭದಲ್ಲಿ ಮೊದಲು ಮಾತನಾಡಿದ ನನ್ನ ಮಿತ್ರರಾದ ಮಾನ್ಯ ಶ್ರೀ ಇಮಾಮ್ ಸಾಹೇಬರು ಹೇಳಿದ ಸರಣಿಯಲ್ಲಿಯೇ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಶ್ರೀ ಇಮಾಮ್ ಅವರು ಪಾರ್ಲಿಮೆಂಟಿಗೆ ಹೋಗುತ್ತಾರೆ. ನಾನು ಸ್ವಲ್ಪಕಾಲ ಚುನಾವಣಾ ರಂಗದಿಂದ ದೂರ ಇರಬೇಕೆಂದು ಮನಸ್ಸು ಮಾಡಿರುವುದರಿಂದ ಇದೇ ನನ್ನ ಕಡೆಯ ಬಜೆಟ್ ಭಾಷಣವಾಗಿದೆ. ಕಳೆದ ಐದುವರ್ಷಗಳ ಕಾಲ ನಾನು ಒಂದು ವಿಚಿತ್ರವಾದ ಸ್ಥಿತಿಯಲ್ಲಿ ಈ ನಭೆಯಲ್ಲಿ ಇದ್ದೆನು. ಅದೇನೆಂದರೆ, ಪೂರ್ತಿಯಾಗಿ ಕಾಂಗ್ರೆಸ್ಸಿನಿಂದ ಹೊರಕ್ಕೆ ಬಂದವನೂ ಅಲ್ಲ, ಪೂರ್ತಿಯಾಗಿ ವಿರೋಧಪಕ್ಷದೊಡನೆ ವಿಲೀನ ಹೊಂದಿದ್ದವನೂ ಅಲ್ಲ. ಹೀಗೆ ಒಂದುರೀತಿಯ ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದೆನು. ಏನಾದರೂ ಆಗಲಿ ಈ ಐದು ವರ್ಷಕಾಲದ ಅವಧಿಯಲ್ಲಿ ಎಲ್ಲ ವರ್ಗದವರೂ, ಎಂದರೆ, ಸರ್ಕಾರ, ಮಂತ್ರಿಮಂಡಲ, ಮಾನ್ಯ ಸದಸ್ಯರು ಎಲ್ಲರೂ ನನಗೆ ಔದಾರ್ಯ ತೋರಿಸಿದ್ದಾರೆ. ಹೀಗೆ ಒಂದೇ ರೀತಿಯಾಗಿ ನನಗೆ ಔದಾರ್ಯ ತೋರಿಸಿದುದಕ್ಕಾಗಿ ನಾನು

ಅವರೆಲ್ಲರಿಗೂ ಋಣಿಯಾಗಿದ್ದೇನೆ ಎಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಇನ್ನು ಆಯವ್ಯಯ ಪಟ್ಟಿಯ ವಿಚಾರವಾಗಿ ಒಂದು ಮಾತು ಹೇಳುತ್ತೇನೆ. ಈ ಐದು ವರ್ಷಗಳ ಕಾಲ ಶ್ರೀ ಇಮಾಮ್ ಸಾಹೇಬರು ಹೇಳಿದ ಹಾಗೆಯೇ, ನಾನೂ ಸಹ ಅಸೆಂಬ್ಲಿಯ ಮುಂದೆ ಬಡ್ಜೆಟ್ ಚರ್ಚೆಗೆ ಬಂದಾಗ ಮೈಸೂರು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲು, ಭದ್ರಗೊಳಿಸಲು ಅಗತ್ಯ ಕ್ರಮಗಳನ್ನು ಸರ್ಕಾರದವರು ಕೈಗೊಳ್ಳುವ ಧೋರಣೆಯನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತಲೇ ಬಂದಿದ್ದೇನೆ. ಹಣಕಾಸಿನ ಬಗ್ಗೆ ಅಭದ್ರತೆಯ ಪರಿಸ್ಥಿತಿಯು ಇರಕೂಡದೆಂದು ಎಚ್ಚರಿಕೆ ಕೊಟ್ಟಿದ್ದೇನೆ. ಸುಭದ್ರವಾದ ತಳಹದಿಯಮೇಲೆ ಆಯವ್ಯಯ ಪಟ್ಟಿ ರಚಿತವಾಗಿರಬೇಕೆಂದು ತಿಳಿಸುತ್ತಲೇ ಬಂದಿದ್ದೇನೆ. ಪ್ರಧಾನ ಶಿರೋಮಣಿ ಮಾಧವರಾವ್ ಸಮಿತಿಯವರು ಹೇಳಿದಹಾಗೆ ಹಣಕಾಸಿನ ಪರಿಸ್ಥಿತಿಯನ್ನು ಆಮೂಲಾಗ್ರವಾಗಿ ಪರಿಶೀಲನಬೇಕು, ಕಂದಾಯದ ಪರಿಸ್ಥಿತಿಯಬಗ್ಗೆ ವಿಚಾರಮಾಡುವುದೂ ಅಗತ್ಯ ಎಂದು ಅನೇಕ ಮಾತುಗಳನ್ನು ಹೇಳುತ್ತ ಬಂದಿದ್ದೇನೆ.

ಕೆಲವು ಮೂಲಭೂತವಾದ ಸಮಸ್ಯೆಗಳ ಬಗ್ಗೆ ಸರ್ಕಾರದ ಧೋರಣೆ ತೃಪ್ತಿಕರವಾಗಿಲ್ಲ, ಅದನ್ನು ಬದಲಾಯಿಸಬೇಕು. ನಾವು ಕೊಟ್ಟಿರತಕ್ಕ ಸೂಚನೆಗಳೇನನ್ನೂ ಕಾರ್ಯಗತಮಾಡುವ ಮನೋಭಾವವಾಗಲ, ದೊಡ್ಡತನವಾಗಲಿ ಇದ್ದಂತೆ ಕಾಣಲಿಲ್ಲ. ಒಂದುಕಡೆ ನನ್ನಮುಂದೆ ನಿಜವಾಗಿಯೂ ಪಾದರಸದಂತೆ ಇರತಕ್ಕವರೂ, ಬಹಳ ಮೇಧಾವಿಗಳೂ ಆದ ಮರಿಯಪ್ಪನವರು ಕಾಣುತ್ತಿದ್ದಾರೆ. ಮತ್ತೊಂದು ಕಡೆ ಅವರು ತಯಾರಿಸಿದ ಬಡ್ಜೆಟ್ಟನ್ನು ನೋಡಿದರೆ ಅಥವಾ ಅದಕ್ಕೆ ಜವಾಬ್ದಾರರಾದವರು ಮಾಡಿದ ಭಾಷಣವನ್ನು ನೋಡಿದರೆ ಆ ರೀತಿ ಅವರ ಮೇಧಾಶಕ್ತಿ ಅಥವಾ ಪಾದರಸದಂತಹ ಜಾಣ್ಮೆ ವ್ಯಕ್ತಪಡುತ್ತಿಲ್ಲ. ಐದುವರ್ಷ ಕಳೆದ ಮೇಲೂ ನಮ್ಮ ದೇಶದ ಆರ್ಥಿಕಸ್ಥಿತಿ ಒಂದೇ ಮಟ್ಟದಲ್ಲಲ್ಲದೆ. ಈ ಸಾರಿ ನಮ್ಮ ಮುಂದೆ ಹನ್ನೆರಡುಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ಟು ಬಂದಿದೆ. ಖೋತಾ ಬಡ್ಜೆಟ್ಟು ಪರಂಪರೆಯಾಗಿ ಈ ರೀತಿ ನಮ್ಮಮುಂದೆ ಬರುತ್ತಿದೆ. ವರ್ಷವರ್ಷವೂ ಎರಡು, ಮೂರು, ನಾಲ್ಕುಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ಟು ಬರುತ್ತಿದ್ದುದು ಈ ಸಾರಿ ಹನ್ನೆರಡುಕೋಟಿ ರೂಪಾಯಿಗಳ ಬಡ್ಜೆಟ್ಟು ಆಗಿದೆ. ಈ ಭಯಾನಕ ದೃಶ್ಯ ನಮ್ಮಮುಂದಿದೆ. ಇದು ಮೇರೆಯನ್ನು ಮೀರಿಹೋಗುತ್ತಿದೆ. ಸಾಮಾನ್ಯ ಜನತೆಯ ದೃಷ್ಟಿಯಿಂದ ಹೀಗೆ ವರ್ಷವರ್ಷವೂ ಒಂದೇ ಸಮನಾಗಿ ಖೋತಾ ಬಡ್ಜೆಟ್ಟುಗಳು ಬರಬಾರದು. ಈ ರೀತಿ ಹನ್ನೆರಡುಕೋಟಿ ರೂಪಾಯಿಗಳ ಖೋತಾ ಬಂದಿರತಕ್ಕ ಸಮಯದಲ್ಲಿ ನಮಗೆ ಸರಕಾರದವರು ಯಾವರೀತಿಯ ಧೈರ್ಯ ಸಮಾಧಾನಗಳನ್ನು ಕೊಡುತ್ತಾರೋ ನನಗೇನೊ ಅರ್ಥವಾಗುವುದಿಲ್ಲ. ಈ ರೀತಿ ಹನ್ನೆರಡುಕೋಟಿ ಖೋತಾ ಬಡ್ಜೆಟ್ಟಿನಿಂದ ಸಾರ್ವಜನಿಕರಿಗೆ ಏನೊಂದೂ ಪ್ರಯೋಜನವಾಗುವುದಿಲ್ಲ. ಸಾಮಾನ್ಯ ಜನರಿಗೆ ಇದರಿಂದ ಒಂದು ವಿಚಾರದಲ್ಲಿ ಸಂತೋಷವೇನೋ ಆಗುತ್ತದೆ. ಅದೇನೆಂದರೆ, ಹೊಸ ಕಂದಾಯವಾಗಲಿ ತೆರಿಗೆಗಳನ್ನಾಗಲಿ ಹಾಕದಿರುವುದು. ಮಾನ್ಯ ಮಂತ್ರಿಗಳಾದ ಮರಿಯಪ್ಪನವರು ಯಾವರೀತಿಯಿಂದ ಈಗಿರತಕ್ಕ ಪರಿಸ್ಥಿತಿಯನ್ನು ಸರಿಪಡಿಸಿಕೊಂಡು ಹೋಗುತ್ತಾರೆ ಮತ್ತು ಯಾವರೀತಿ ಆದಾಯವನ್ನು ಹೆಚ್ಚಿಸುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ನಾನು ಹೇಳಿದಂತೆ ವರ್ಷವರ್ಷವೂ ಪರಂಪರೆಯಾಗಿ ಖೋತಾ ಬಡ್ಜೆಟ್ಟು ಹೀಗೆ ಬೆಳೆಯುತ್ತಾ ಬಂದಿದೆ. ಬಹುಶಃ ಇದನ್ನು ಇಂಡಿಯಾ ಸರ್ಕಾರದವರು ಕೊಡುವ ಹಣದಿಂದ ಸರಿಪಡಿಸಿಕೊಳ್ಳಬಹುದು ಎಂದಿರಬಹುದು. ಆದರೆ ಕೇಂದ್ರ ಸರ್ಕಾರದವರು ಕೇಳಿದಹಾಗೆ ಹಣ ಕೊಡುತ್ತಾರೆಂಬ ನಿರೀಕ್ಷೆಯ ಮೇಲೆ ಹೀಗೆ ಈ ಪರಿಸ್ಥಿತಿಯನ್ನು ಬೆಳೆಸಿಕೊಂಡು ಹೋಗತಕ್ಕ ಮಾರ್ಗ ಸರಿಯಾದ ಮಾರ್ಗವೇ ಎಂಬುದನ್ನು ತೀವ್ರವಾಗಿ ಯೋಚನೆಮಾಡಬೇಕಾದದ್ದು ಅಗತ್ಯವಾಗಿದೆ. ಪ್ರಾಯಶಃ ಇವೊತ್ತಿನ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಯೋಚನೆಮಾಡುತ್ತಾ ಬಂದರೆ ಕೇಂದ್ರ ಸರ್ಕಾರದ ಬೊಕ್ಕಸದ ಮೇಲೆ ಬಹಳ ಗುರುತರವಾದ ಜವಾಬ್ದಾರಿ ಬಿದ್ದಿದೆ. ಆದುದರಿಂದ ಈ ರೀತಿಯ ಹೆಚ್ಚಿನ ಹೊರೆಯನ್ನು ಕೇಂದ್ರದ ಮೇಲೆ ಹೊರಿಸುವುದು ಸರಿಯಾದ ಮಾರ್ಗವಲ್ಲ. ನಾವು ನಾಲ್ಕೈದು ವರ್ಷಗಳಿಂದಲೂ ಸಂಸ್ಥಾನದ ಆರ್ಥಿಕ ಪರಿಸ್ಥಿತಿಯನ್ನು ಅಂಕಿ ಅಂಶಗಳೊಡನೆ ಆಮೂಲಾಗ್ರವಾಗಿ ಪರಿಶೀಲಿಸಲು ಒಂದು ಪರಿಣತರ ಸಮಿತಿಯನ್ನು ನೇಮಿಸಬೇಕೆಂದು ಕೇಳುತ್ತಲೇ ಬಂದಿದ್ದೇವೆ. ಇದರಿಂದ ದೇಶಕ್ಕೆ ಅನುಕೂಲವಾಗುತ್ತದೆ. ಅನೇಕ ರೀತಿಯಾಗಿ ನಮ್ಮ ದೇಶದಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳು ಎಷ್ಟೋ ಇವೆ. ಕೋಟ್ಯಂತರ ರೂಪಾಯಿಗಳನ್ನು ಅಳವಡಿಸಿಕೊಂಡು ದೊಡ್ಡದೊಡ್ಡ ಕೆಲಸಗಳನ್ನು ಮಾಡಿ ನಮ್ಮ ನಾಡಿನ ಸೊಬಗು ಸೌಭಾಗ್ಯಗಳನ್ನು ಹೆಚ್ಚಿಸಬೇಕಾಗಿದೆ. ಹೀಗಿರುವಾಗ, ಕೇಂದ್ರ ಸರ್ಕಾರದ ಹಣ ಸಹಾಯವನ್ನು ನಿರೀಕ್ಷಿಸಿ ಅದಕ್ಕನುಗುಣವಾಗಿ ಖೋತಾ ಬಡ್ಜೆಟ್ಟನ್ನು ನಮ್ಮಮುಂದೆ ಇಡುವ ಸರಕಾರದ ಮನೋಭಾವ ಸರಿಯೇ ಎಂದು ನಾನು ಪ್ರಶ್ನಿಸಬೇಕಾಗಿದೆ.

ಹಿಂದೆ ಒಂದು ಪರಿಣತರ ಸಮಿತಿಯನ್ನು ನೇಮಿಸಬೇಕೆಂದು ಹೇಳಿದಾಗ, ಆಗಿನ ಹಣಕಾಸಿನ ಸಚಿವರಾಗಿದ್ದ ಶ್ರೀಮಾನ್ ಹನುಮಂತಯ್ಯ ಅವರು ಆ ಸಲಹೆಯನ್ನು ಸ್ವಾಗತಿಸುತ್ತಾ, ಇಂತಹ, ದೊಡ್ಡ ದೊಡ್ಡ ವಿಚಾರಗಳಲ್ಲಿ ಮೂಲಭೂತವಾದ ನೀತಿಯನ್ನು, ಕರ್ಣಾಟಕ ಒಕ್ಕೂಟವಾಗಬೇಕು ಎಂದು ಹೇಳತಕ್ಕ ಸಂದರ್ಭದಲ್ಲಿ, ನಿರ್ಧಾರಮಾಡುವುದು ಸರಿಯಾದುದಲ್ಲವೆಂದು ಹೇಳಿದುದು ನನಗೆ ಈಗಲೂ ನೆನಪಿಗೆ ಬರುತ್ತಿದೆ. ಆ ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಬಡ್ಜೆಟ್ಟು, ಕೇವಲ ಅಂಕಿ ಅಂಶಗಳನ್ನು ಸೇರಿಸಿ, ಗಣಿತ ಶಾಸ್ತ್ರದ ನೈಪುಣ್ಯತೆಯನ್ನು ತೋರಿಸತಕ್ಕ ಬಡ್ಜೆಟ್ಟಾಗಿರಬಾರದು. ನಾವು ಒಂದು ಬಡ್ಜೆಟ್ಟನ್ನು ಪರೀಕ್ಷೆ ಮಾಡಿದರೆ, ಆ ಬಡ್ಜೆಟ್ಟಿಗೆ ಸಂಬಂಧಪಟ್ಟ ದೇಶದ ಸ್ಥಿತಿಗತಿಗಳು ಹೇಗಿವೆ ಎಂಬುದು ಕಣ್ಣಿಗೆ ಕಾಣುವಂತಿರಬೇಕು. ಆದರೆ ಈಗಿರುವ ಬಡ್ಜೆಟ್ಟನ್ನು ಪರೀಕ್ಷೆ ಮಾಡಿದರೆ ಅದರಲ್ಲಿ ಆರೀತಿ ಏನೂ ಕಾಣುವುದಿಲ್ಲ. ಫೈನಾನ್ಸ್ ಮಿನಿಸ್ಟರು ಕಳೆದ ಎರಡು ದಿವಸಗಳಿಂದ ಹೇಳುವುದನ್ನು ನೋಡಿದರೆ, ಅವರು ಕೇವಲ ಅಂಕಿ ಅಂಶಗಳ ವಿಚಾರವನ್ನು ಮಾತ್ರ ಗಮನಿಸಿದಹಾಗೆ ತೋರುತ್ತದೆ. ಇವೊತ್ತು ಕಾಲಗತಿ ಬಹುವೇಗವಾಗಿ ಹೋಗುತ್ತಿದೆ. ಹಾಗೆ ವೇಗದಿಂದ ಹೋಗುತ್ತಿದ್ದರೂ ನಮ್ಮ ಬಡ್ಜೆಟ್ಟಿನಲ್ಲಿ ಅದಕ್ಕನುಗುಣವಾದ ಬದಲಾವಣೆ ಏನೂ ಕಂಡು ಬರುವುದಿಲ್ಲ.

ನನ್ನ ಮಿತ್ರರಾದ ಶ್ರೀ ಇಮಾಂ ಅವರು ಫೈನಾನ್ಸ್ ವಿಷಯದ ಚರ್ಚೆಗೆ ಕೈಹಾಕುವುದಿಲ್ಲ ಎಂದು ಹೇಳಿದರು. ಮೇ ಮಾಹೆಯಲ್ಲಿ ಸಮಾವೇಶಗೊಳ್ಳುವ ಮುಂದಿನ ಬಡ್ಜೆಟ್ಟಿನ ಅಧಿವೇಶನದಲ್ಲಿ ನಮ್ಮ ಫೈನಾನ್ಸ್ ಮಿನಿಸ್ಟರು ವಿವರಗಳನ್ನು ಒದಗಿಸಲು ಎಷ್ಟೋ ಕೆಲಸಗಳನ್ನು ಮಾಡಬೇಕಾಗಿದೆ.

(ಶ್ರೀ ಕೆ. ಪಟ್ಟಾಭಿರಾಮನ್)

ಈಗ ನಂತಾನಂ ಕಮಿಷನ್ ವಿಚಾರ ಪ್ರಸ್ತಾಪ ಮಾಡೋಣ. ನಾವು ಈ ಕಮಿಷನ್ನಿಗೆ ಇಲ್ಲಿಯ ಸ್ಥಿತಿಗತಿಗಳನ್ನು ತಿಳಿಸಿ ಒಂದು ಮೆಮೋರ್ಯಾಂಡಮ್ ಕೊಟ್ಟಿದ್ದೇವೆ. ಹಿಂದೆ ಮೈಸೂರಿಗೆ ಹತ್ತು ಜಿಲ್ಲೆಗಳು ಮಾತ್ರ ಸೇರಿದ್ದವು. ಈಗ ಎಲ್ಲ ಕನ್ನಡ ಪ್ರದೇಶಗಳ ಒಕ್ಕೂಟವಾದನಂತರ, ವಿಶಾಲ ಮೈಸೂರಿನ ಸ್ಥಿತಿಗತಿಗಳಿಗನುಸಾರವಾಗಿ ಅದಕ್ಕೆ ಹೊಂದಿಕೊಳ್ಳುವ ಹಾಗೆ ನಮ್ಮ ಅಂಕಿಅಂಶಗಳನ್ನು ಅದರ ಮುಂದಿಡಬೇಕು. ಈ ಸಂದರ್ಭದಲ್ಲಿ ಮಾಧವರಾವ್ ಕಮಿಟಿಯವರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಂತೆ ಆದಷ್ಟು ಜಾಗ್ರತೆ ಅಂಕಿಅಂಶಗಳನ್ನು ಶೇಖರಿಸಿ ಈ ನಂತಾನಂ ಕಮಿಷನ್ನಿನ ಮುಂದೆ ಇಡಬೇಕೆಂದು ಹೇಳುತ್ತೇನೆ. ಈಗ ಕೇಂದ್ರ ಸರಕಾರದವರು ನಮ್ಮ ಸಂಸ್ಥಾನಕ್ಕೆ ವರ್ಷೇ ವರ್ಷೇ ಎರಡು ಕೋಟಿ, ಮೂರು ಕೋಟಿ ರೂಪಾಯಿಗಳ ಗ್ರಾಂಟನ್ನೂ, ಸಾಲಗಳನ್ನೂ ಕೊಡುತ್ತಾ ಬಂದಿದ್ದಾರೆ. ಈ ರೀತಿಯ ಸೆಂಟ್ರಲ್ ಅಸಿಸ್ಟೆನ್ಸನ್ನು ಯಾವಾಗಲೂ ಕೊಡುವಂತಹ ಕಾಮಧೇನು ಎಲ್ಲಿದೆಯೋ ನನಗೆ ಅರ್ಥವಾಗುತ್ತಿಲ್ಲ, ಅದರಂತೆ ಹಣ ಸಹಾಯ ಬಂದರೆ ನನಗೂ ಸಂತೋಷ. ಆದರೆ ವರ್ಷೇ ವರ್ಷೇ ಈ ರೀತಿಯ ಖೈತಾ ಬಡ್ಜೆಟ್ಟನ್ನು ತಂದು ಕೇಂದ್ರ ಸರಕಾರದ ಧನ ಸಹಾಯದ ಮೇಲೆ ನಮ್ಮ ಕೆಲಸಕಾರ್ಯಗಳನ್ನು ಮಾಡಬೇಕೆಂದರೆ ಅದನ್ನು ನೋಡಿ ಯಾರೂ ಸಂತೋಷಪಡಲಾರರು. ಆದ್ದರಿಂದ ಮುಖ್ಯವಾಗಿ ನಾನು ಸಲಹೆ ಮಾಡತಕ್ಕದ್ದೇನೆಂದರೆ, ಕಾಲ ಇನ್ನೂ ಮಿಂಚಿಹೋಗಿಲ್ಲ. ನಾವು ಯಾವ ಸಲಹೆಗಳನ್ನು ಕೊಟ್ಟಿದ್ದೇವೋ ಅವುಗಳನ್ನು ಕಾರ್ಯಗತಮಾಡಬೇಕು. ಇವನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರದವರಿಗೆ ಇಷ್ಟವಿದೆಯೋ ಇಲ್ಲವೋ ಗೊತ್ತಿಲ್ಲ.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೇರೆ ಬೇರೆ ಕಡೆ ಕೊಟ್ಟಿದ್ದುದನ್ನೆಲ್ಲ ಪಿಲೀನಮಾಡಿ ವಿಶಾಲ ಮೈಸೂರಿಗೆ ಅನ್ವಯವಾಗುವ ಹಾಗೆ ಒಂದು ತಃಖ್ತೆಯನ್ನು ತಯಾರು ಮಾಡಬೇಕು. ಆರೀತಿ ಮಾಡಿದಾಗ ಹಣಕಾಸಿನ ಖರ್ಚು ಎಷ್ಟಾಗುತ್ತದೆ, ಯಾವುದು ಮುಂದುಮಾಡತಕ್ಕದ್ದು, ಯಾವುದು ಮತ್ತೆ ಉಳಿಯತಕ್ಕದ್ದು ಎಂದು ತಿಳಿಯಲು ಸಹಾಯಕವಾಗುತ್ತದೆಂಬ ದೃಷ್ಟಿಯಿಂದ, ಇವೆಲ್ಲವನ್ನೂ ವಿಮರ್ಶೆಮಾಡಬೇಕು ಎಂದು ಒಂದು ಸಲಹೆಯನ್ನು ಎರಡು ತಿಂಗಳ ಮುಂಚೆ ಕೊಟ್ಟಿದ್ದೆ. ಆದರೆ ಆರೀತಿ ಏನೂ ಮಾಡಿದಂತೆ ಕಾಣುವುದಿಲ್ಲ. ಎರಡನೆಯ ಪಂಚವಾರ್ಷಿಕ ಯೋಜನೆಯ ವಿಚಾರದಲ್ಲಿ items ವಿವರಗಳನ್ನು ಕೊಡುವಾಗ, ಅವಕ್ಕೆ ಬೇಕಾಗತಕ್ಕ ಹಣದ ಪೆಚ್ಚಿದ ಬಗ್ಗೆ ಹಣವನ್ನೊದಗಿಸುವ ಮಾರ್ಗಗಳನ್ನು ಸೂಚಿಸಿಲ್ಲ. ಕೇಂದ್ರದವರು ಸಾಲ ಕೊಡುತ್ತಾರೆಂದು ಧೈರ್ಯದಿಂದ ಮುಂದುವರಿಸತಕ್ಕ ಮನೋಭಾವ ತೃಪ್ತಿಕರವಾಗಿಲ್ಲ, ಚೆನ್ನಾಗಿಲ್ಲ. ದೇಶದಲ್ಲಿ ಆಗಬೇಕಾದ ಕಾರ್ಯಗಳು ಬಹಳವಾಗಿವೆ. ದಿನ ದಿನಕ್ಕೂ ನಿರ್ವಾಹದ ಜವಾಬ್ದಾರಿಗಳೂ, ಜನರ ನಿರೀಕ್ಷಣೆಗಳೂ ಜಾಸ್ತಿಯಾಗುತ್ತಿವೆ. ದೇಶದಲ್ಲಿ ಸಾಮಾನ್ಯ ಪ್ರಜೆಯೂ ಈಗ ಈ ಬಡ್ಜೆಟ್ಟನ್ನು ನೋಡುತ್ತಾನೆ. ನಾವು ಕೆಲವರು ಮಾತ್ರ ನೋಡತಕ್ಕದ್ದಲ್ಲ. ಬಡ್ಜೆಟ್ಟಿನ ಕಾರ್ಯಕ್ರಮಗಳಿಗೂ, ಶಾಸನನಿಧಿಗಳ ಬೇರೆ ಕಾರ್ಯಕ್ರಮಗಳಿಗೂ ಒಂದು ಪ್ರಬಲವಾದ ವ್ಯತ್ಯಾಸವುಂಟು. ಬೇರೆ ಕಾರ್ಯಕ್ರಮಗಳನ್ನು ಮಾಡದೆ ಇದ್ದರೂ ಅವುಗಳ ಪ್ರಭಾವ ಬಹುಮಟ್ಟಿಗೆ ಕುಂಠಿತವಾಗುವುದಿಲ್ಲ. ಆದರೆ ಬಡ್ಜೆಟ್ ಇಡಿಯ ಸಂಸ್ಥಾನಕ್ಕೆ ಸಂಬಂಧಪಟ್ಟದ್ದು; ಅದರಲ್ಲಿಯೂ ಕೇವಲ ಸಾಮಾನ್ಯ ಪ್ರಜೆಗೆ ಹೆಚ್ಚು ಸಂಬಂಧಪಟ್ಟದ್ದು. ಅವನ ಹಿತವನ್ನು ಕಾಪಾಡುವುದಕ್ಕೆ ಅವನಮೇಲೆ ಹೊರೆ ಕಡಮೆ ಮಾಡುವುದಕ್ಕೆ ಸಹಾಯಮಾಡತಕ್ಕ ಯಾವ ಒಂದು ಸೂಚನೆಯನ್ನೂ ಈ ಬಡ್ಜೆಟ್ಟಿನಲ್ಲಿ ನಾನು ಕಾಣುತ್ತಿಲ್ಲ. ಹೀಗಿರುವಾಗ ನಾನು ಹೇಗೆತಾನೇ ನನ್ನ ಪರಮ ಮಿತ್ರರಾದ ಶ್ರೀಮಾನ್ ಮರಿಯಪ್ಪನವರನ್ನೂ ಅಭಿನಂದಿಸಬೇಕೋ ಗೊತ್ತಿಲ್ಲ. ಒಂದುಕಡೆ ಕಡೆಯ ಭಾಷಣವಾದ್ದರಿಂದ ಎರನವಾಗಿ ಮಾತನಾಡಬಾರದು ಎಂಬ ಇಚ್ಛೆ ಇದೆ. ಮತ್ತೊಂದು ಕಡೆ ವನ್ನು ಸ್ಥಿತಿಯನ್ನು ನೋಡಿದರೆ ಮುಂದೆ ಏನಾಗುತ್ತದೆಯೋ ಎನ್ನುವ ಭಯವಾಗುತ್ತದೆ. ಆದುದರಿಂದ ನಾನು ಮುಖ್ಯವಾಗಿ, ತಮ್ಮ ಮೂಲಕ, ಈ ನಭೆಗೆ ಮತ್ತು ಸರಕಾರಕ್ಕೆ ತಿಳಿಸುವುದು ಏನೆಂದರೆ, ನಾವು ದೊಡ್ಡ ಜವಾಬ್ದಾರಿಯನ್ನು ಹೊತ್ತಿದ್ದೇವೆ. ಆದ್ದರಿಂದ ಮಿತವ್ಯಯ ಮಾಡಬೇಕು. ಆಡಳಿತ ದೃಷ್ಟಿಯಿಂದ, ಆಡಳಿತ ಮಾರ್ಗದಲ್ಲಿ ಬದಲಾವಣೆ ಯಾಗಬೇಕು. ಇವೊತ್ತಿನ ದಿವನ ಯಾವುದಾದರೂ ಒಂದು ಕೆಲಸವಾಗಬೇಕು ಎಂದರೆ—ನಮ್ಮ ದೃಷ್ಟಿಯಲ್ಲಿ ಮೊದಲನಿಂದಲೂ ಬಂದಿರುವಹಾಗೆ ಒಂದು ಇಲಾಖೆಯನ್ನು ಅದಕ್ಕಾಗಿ ಏರ್ಪಾಡು ಮಾಡುವುದು, ಮತ್ತು ಅಂಥ ಒಂದು ಇಲಾಖೆಯನ್ನು ಮಾಡಿದಮೇಲೆ ಆ ಕೆಲಸವಾಯಿತು ಎಂದು ಭಾವಿಸುವುದು, ಆ ದೃಷ್ಟಿ ಚೆನ್ನಾಗಿಲ್ಲ. ವಿಕೇಂದ್ರೀಕೃತವಾದ ಪ್ರಜಾಪ್ರಭುತ್ವ ಪದ್ಧತಿಯನ್ನು ಜಾರಿಗೆ ತರಬೇಕು ಎಂಬ ಮೂಲಭೂತವಾದ ತತ್ವವನ್ನು ಅಂಗೀಕರಿಸಿರುವಾಗ ಅದಕ್ಕೆ ಸಂಬಂಧಪಟ್ಟಹಾಗೆ ಆಡಳಿತದ ಧೋರಣೆ ಮತ್ತು ಆಡಳಿತದ ಮಾರ್ಗದಲ್ಲಿಯೂ ಕೂಡ ಬದಲಾವಣೆಯಾಗಬೇಕು. ಮೂಲಭೂತ ಸಮಸ್ಯೆಗಳ ಪರಿಹಾರದ ವಿಚಾರದಲ್ಲಿ ಐದು ವರ್ಷಗಳಿಂದಲೂ ಮತ್ತು ಇವೊತ್ತು ಕೂಡ ನಾವು ಏನು ಹೇಳುತ್ತಿದ್ದೇವೆಯೋ ಅದು ಆಗುವವರೆಗೂ ಸರಕಾರವನ್ನು ನರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಆಗುವುದಿಲ್ಲ. ಸರಕಾರದ ತಲೆಯ ಮೇಲೆ ದೊಡ್ಡ ಭಾರವಿರುವಾಗ, ಈಗ ಇರುವ ರೀತಿಯಲ್ಲಿಯೇ ಎಷ್ಟು ದಿವನ ಆಡಳಿತ ಮಾಡಿದರೂ ಆ ಹೊರೆಯನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ; ಕಷ್ಟಪಡಲೇಬೇಕಾಗುತ್ತದೆ. ಆದುದರಿಂದ ಮೂಲ ಭೂತ ಸಮಸ್ಯೆಗಳ ಬಗ್ಗೆ ತಮ್ಮ ಭಾವನೆಯನ್ನು ತಮ್ಮ ದೃಷ್ಟಿಯನ್ನು, ಹೊರಳಿಸಿ ಅವುಗಳ ಪರಿಹಾರ ಕಾರ್ಯವನ್ನು ಕೈಗೊಳ್ಳಬೇಕಾಗಿದೆ.

ನಮ್ಮ ಕೈಗೆ ಆಡಳಿತ ಬಂದು ಪ್ರಜಾಪ್ರಭುತ್ವದ ಪದ್ಧತಿಯ ಮೇಲೆ ಸರಕಾರವನ್ನು ನಡೆಸಲು ಪ್ರಾರಂಭಿಸಿ ಈಗಾಗಲೇ ಐದು ವರ್ಷಗಳಾದರೂ ಕೇಂದ್ರೀಕೃತ ಕ್ರಮಗಳನ್ನೇ ಸರಕಾರ ಮುಂದುವರಿಸಿಕೊಂಡು ಬರುತ್ತಿದೆ. ಒಂದೇ ಒಂದು ಉದಾಹರಣೆಯನ್ನು ತಮಗೆ ತಿಳಿಸುತ್ತೇನೆ. ಜಿಲ್ಲಾ ಬೋರ್ಡ್‌ಗಳ ವಿಚಾರವಾಗಿ ಇವೊತ್ತಿನ ದಿವನ ಪ್ರಶ್ನೋತ್ತರ ಕಾಲದಲ್ಲಿ ಚರ್ಚೆ ನಡೆದಾಗ ತಾವು ಗಮನಿಸಿದಿರಿ. ನನ್ನ ಮಿತ್ರರಾದ ಶ್ರೀಮಾನ್ ಇಮಾಂ ಅವರು ಕೂಡ ಜಿಲ್ಲಾಬೋರ್ಡ್ ಚುನಾವಣೆಗಳ ವಿಚಾರದಲ್ಲಿ ಮಾತನಾಡಿದ್ದಾರೆ. ಈಗ ಐದು ವರ್ಷಗಳಿಂದ ಮಹಾಭಾರತವೇ ಈ ನಭೆಯಲ್ಲಿ ನಡೆದಿದೆ ಎಂದರೆ ತಪ್ಪಾಗಲಾರದು. ಕಡೆಯ ಭಾಷಣ ಬಾದುದರಿಂದ ಆರೋಪಣೆಮಾಡಿ ಮಾತನಾಡಲು ನನಗೆ ಇಷ್ಟವಿಲ್ಲ. ಜಿಲ್ಲಾ ಬೋರ್ಡುಗಳ ವಿಚಾರದಲ್ಲಿ ಸರಕಾರ ಇಟ್ಟುಕೊಂಡಿರುವ ನೀತಿ, ತಳೆದಿರತಕ್ಕ ಧೋರಣೆ ಖಂಡಿತವಾಗಿಯೂ ಯಾವ ಸರಕಾರಕ್ಕೂ ಕೂಡ ಮಾನ ತರತಕ್ಕದ್ದಲ್ಲ; ಮತ್ತು ಇದಕ್ಕೆ ಸರಕಾರ ಸಂತೋಷ ಪಡತಕ್ಕದ್ದಲ್ಲ. ಏನಾದರೂ ಸ್ವಲ್ಪ

ಮಟ್ಟಿಗೆ ಸಾಮಾನ್ಯ ಪ್ರಜೆಗೆ, ಹಳ್ಳಿಗಾಡಿನ ಪ್ರಜೆಗೆ, ನಾಡಿನಲ್ಲಿರತಕ್ಕ ಜನಗಳಿಗೆ ಆಡಳಿತ ದೃಷ್ಟಿಯಿಂದ ಸ್ವಲ್ಪ ತರಬೇತಾಗಲು, ಅನುಭವ ಪಡೆಯಲು ಯಂತ್ರ ಸಾಧನೆ ಎಂದರೆ, ಅದು ಜಿಲ್ಲಾ ಬೋರ್ಡುಗಳು. ಅದನ್ನು ಮೊಟಕು ಮಾಡಿದ್ದೀರಿ. ಅವಕ್ಕೆ 1947 ರಲ್ಲಿ ಚುನಾವಣೆಗಳಾದವು. ಹತ್ತು ವರ್ಷಗಳಾದರೂ ಕೂಡ ಇದುವರೆಗೂ ಚುನಾವಣೆಗಳಿಗೆ ಕೈ ಹಾಕಲಿಕ್ಕೆ ಹೋಗಿಲ್ಲ. ಇವೊತ್ತಿನದಿವಸ ಪ್ರಶ್ನೋತ್ತರ ಕಾಲದಲ್ಲಿ ಶ್ರೀ ನಾಗನಗೌಡರು ಒಂದು ಪ್ರಶ್ನೆ ಕೇಳಿದಾಗ ಅದಕ್ಕೆ ಮಂತ್ರಿಗಳು ನೇರವಾದ ಜವಾಬು ಕೊಡದೆ ಇದ್ದರೂ, ಪಂಚಾಯಿತಿಗಳನ್ನು ಮತ್ತು ಜಿಲ್ಲಾ ಬೊರ್ಡುಗಳನ್ನೂ ಸಮನ್ವಯಗೊಳಿಸತಕ್ಕ ರೀತಿಯಲ್ಲಿ ಒಂದು ನೂತನ ಶಾಸನವನ್ನು ಮಾಡಿ ಅದರ ಆಧಾರದಮೇಲೆ ಚುನಾವಣೆಗಳನ್ನು ನಡೆಸುತ್ತೇವೆ ಎಂಬಂತೆ ತಿಳಿಸಿದರು. ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಕೂಡಬೇಕು. ಅವುಗಳಿಗೆ ವಿಕೇಂದ್ರೀಕೃತ ಆಡಳಿತಾಧಿಕಾರ ಕೊಡಬೇಕು. ಇದು ಐದು ವರ್ಷಗಳಿಂದಲೂ ಪ್ರತಿಯೊಂದು ಸಭೆಯಲ್ಲಿಯೂ ಚರ್ಚೆಯಾಗುತ್ತಾ ಇದೆ. ಆದರೂ ಒಂದು ಹೆಜ್ಜೆಕೂಡ ಸರಕಾರ ಮುಂದೆ ಹೋಗುವದಕ್ಕೆ ಆಗಿಲ್ಲ. ಬಿಹಾರ, ಬೊಂಬಾಯಿ, ಉತ್ತರ ಪ್ರದೇಶ ಮುಂತಾದ ಕಡೆಗಳಲ್ಲಿ ಪಂಚಾಯಿತಿಗಳಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಕೊಟ್ಟು ಒಂದಾನ್ನೊಂದು ಕಾಲದಲ್ಲಿ ಪಂಚಾಯಿತಿಗಳು ತಾವೇ ಆಡಳಿತವನ್ನು ನಡೆಸಿಕೊಂಡು ಹೋಗಲು ಅವಕಾಶವಾಗುವಂಥ ಕಾರ್ಯಕ್ರಮಗಳನ್ನು ಕೈಗೊಂಡು ಎಷ್ಟು ಮಟ್ಟಿಗೆ ಪ್ರಗತಿಗಾಮಿಯಾದ ಹೆಜ್ಜೆಗಳನ್ನಿಟ್ಟುಕೊಂಡು ಮುನ್ನಡೆಯುತ್ತಿದ್ದಾರೆಂದು ಯೋಚನೆ ಮಾಡಿದರೆ, ನಮ್ಮ ಸಂಸ್ಥಾನದಲ್ಲಿ ಒಂದು ಹೆಜ್ಜೆ ಮುಂದೆ ಇಡಲಿಕ್ಕೆ ಹೋಗುವುದು ಇರಲಿ ಇಟ್ಟಿರತಕ್ಕ ಹೆಜ್ಜೆಯನ್ನು ಹಿಂದೆ ಹಾಕಲಿಕ್ಕೆ ಈ ಸರಕಾರ ಹೋಗುತ್ತಿದೆ ಎಂದರೆ ಯಾವರೀತಿ ಸಂತೋಷ ಪಡಬೇಕೋ ನನಗೆ ಅರ್ಥವಾಗುತ್ತಿಲ್ಲ. ಹೀಗೆ ಒಂದೊಂದು ದೃಷ್ಟಿಯಿಂದ ಯೋಚನೆಮಾಡಿದರೂ ಕೂಡ ಈ ಸರಕಾರ ಹೋಗುತ್ತಿರುವ ದಾರಿ ಸರಿಯಲ್ಲ. ಶ್ರೀ ಕೆ. ಹನುಮಂತಯ್ಯನವರು ಟ್ರೆಜರಿ ಬೆಂಚಿನಲ್ಲಿ ದ್ದಾಗ ಈ ಬಗ್ಗೆ ಹೇಳಿದ್ದು ನನಗೆ ನೆನಪಿಗೆ ಬರುತ್ತಿದೆ. ಜಿಲ್ಲಾಬೋರ್ಡಿಗೆ ಸಂಬಂಧಪಟ್ಟ ಮಸೂದೆ ಚರ್ಚೆಗೆ ಬಂದಾಗ ನಾನು ಶ್ರೀ ಕೆ. ಹನುಮಂತಯ್ಯನವರಿಗೆ ವಿಶೇಷ ಅಧಿಕಾರಿಗಳನ್ನು ನೇಮಕಮಾಡುವ ಸಂದರ್ಭದಲ್ಲಿ ಒಂದು ಪ್ರಶ್ನೆ ಹಾಕಿದಾಗ ಆರು ತಿಂಗಳೊಳಗೆ ಅವರ ವ್ಯಾಪ್ತಿಯನ್ನು ಮುಕ್ತಾಯಮಾಡಿ ಜಿಲ್ಲಾ ಬೋರ್ಡುಗಳು ಮತ್ತೆ ನವಚೈತನ್ಯದಿಂದ ತಾಂಡವ ಪಾಡತಕ್ಕ ರೀತಿಯಲ್ಲಿ ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಅವರು ಕೊಟ್ಟಿದ್ದರು. ಅವರು ಅಲ್ಲಿಂದ ಬಂದು ನನ್ನ ಹಿಂದುಗಡೆ ಕುಳಿತುಕೊಂಡುದರಿಂದ ತಡವಾಯಿತೋ ಏನೋ ಗೊತ್ತಾಗಲಿಲ್ಲ. ಇವೊತ್ತಿನ ದಿವಸ ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಚೆನ್ನಿಗರಾಮಯ್ಯನವರು ಒಂದು ಧೋರಣೆಯಿಂದ ಕೊಟ್ಟಂಥ ಜವಾಬನ್ನು ಕೇಳಿದುದರಿಂದ ಖಂಡಿತವಾಗಿ ನನಗೆ ಸಂತೋಷವಾಗಲಲ್ಲ; ಬಹಳಮಟ್ಟಿಗೆ ವ್ಯಸನವಾಯಿತು. ಎಷ್ಟು ಜಾಗ್ರತೆಯಾಗಿ ಚುನಾವಣೆಗಳನ್ನು ನಡೆಸುತ್ತೀರಿ ಎಂದು ಕೇಳಿದ್ದಕ್ಕೆ 'ಅಗತ್ಯವಾದಷ್ಟು ಜಾಗ್ರತೆಯಾಗಿ' ಎಂದು ಹೇಳಿದರು. May it be known to whom so ever it concerns" ಎಂದು ಹೇಳುವುದುಂಟು. ಏಕೆಂದರೆ ಆ ಮಾತು ಹೇಳಿದರೆ ಯಾರಿಗೆ ಅನ್ವಯಿಸುತ್ತದೆಯೋ ಅವರಿಗೆ ಎಂದು ಹೇಳುತ್ತೇವೆ. ಆದರೆ ಈರೀತಿಯ ಧೋರಣೆಯ ಜವಾಬನ್ನು ಜವಾಬ್ದಾರಿ ವಹಿಸಿರತಕ್ಕ ಸ್ಥಾನದಿಂದ ಮಂತ್ರಿಗಳುಕೊಟ್ಟರೆ ಪ್ರಜಾಪ್ರತಿನಿಧಿಗಳಾದ ನಾವು ಇವರ ನಿಲುವನ್ನು ಏನೆಂದು ದೇಶಕ್ಕೆ ಮುಟ್ಟಿಸುವುದ ಕ್ಕಾಗುತ್ತದೆಯೋ ಗೊತ್ತಿಲ್ಲ. ಜಿಲ್ಲಾಬೋರ್ಡ್ ವಿಚಾರದಲ್ಲಿ ಇವರಿಗೆ ಹಿಂದಿನಿಂದಲೂ ಇರುವ ಧೋರಣೆ, ಇವರು ಹೋಗಿರತಕ್ಕ ಮಾರ್ಗ ಬಹಳ ಹಾಸ್ಯಾಸ್ಪದವಾಗಿವೆ. ಅದಷ್ಟು ಜಾಗ್ರತೆ ಎಲ್ಲವೂ ಸಮನ್ವಯವಾಗಬೇಕು. ಜಿಲ್ಲಾ ಬೋರ್ಡುಗಳು ಬೇಡ, ಅವಶ್ಯಕವಿಲ್ಲ, ಎಂದರೆ ತೆಗೆದುಹಾಕಿ. ಒಂದೇ ಕಡೆಯಲ್ಲಿ ವಿಧಾನ ಸೌಧದಲ್ಲಮಾತ್ರ ಅಧಿಕಾರವಿರಲಿ, ಜಿಲ್ಲಾಬೋರ್ಡುಗಳು ಬೇಡವೆಂದು ಅದನ್ನಾದರೂ ಹೇಳಿದರೆ ಒಪ್ಪಿಕೊಳ್ಳೋಣ. ನಾನು ಹೆಚ್ಚು ವಿಸ್ತಾರ ಮಾಡುವುದಕ್ಕೆ ಹೋಗುವುದಿಲ್ಲ. ಮೂಲಭೂತವಾದ ಸಮಸ್ಯೆಗಳನ್ನು ಪರಿಹಾರಮಾಡಿ, ವಿಮರ್ಶೆ ಮಾಡಲಿಕ್ಕೆ ಹೋಗತಕ್ಕ ಮನೋಭಾವವನ್ನು ಈ ಸರಕಾರ ತೋರಿಸದೆ ಹೋದರೆ, ಉತ್ಸಾಹ ಭಂಗವಾಗಿ, ನಿರೀಕ್ಷಣೆ ಮಾಡಿದಷ್ಟು ದೇಶ ಉದ್ಧಾರವಾಗುವುದಿಲ್ಲ.

ಇನ್ನೂ ಅನೇಕ ಸಮಸ್ಯೆಗಳು ನಮ್ಮಮುಂದೆ ಇವೆ. ಶ್ರೀ ಇಮಾಂ ಅವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಪಟೇಲ, ಶ್ಯಾನುಭೋಗರ ವಿಚಾರವಾದ ಸಮಸ್ಯೆ ಎಷ್ಟು ಭೀಕರವಾಗಿದೆ ಎನ್ನುವುದನ್ನು ನಾನು ಹೇಳಬೇಕಾಗಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂಕೂಡ ಒಬ್ಬೊಬ್ಬ ಪಟೇಲ, ಶ್ಯಾನುಭೋಗರಿರುತ್ತಾರೆ. ಪ್ರಾಯಶಃ ನಮ್ಮ ಸಮಾಜ ಅವರ ಆಧಾರದಮೇಲೆ ಕಟ್ಟಲ್ಪಟ್ಟಿದೆ ಎಂದರೆ ತಪ್ಪಾಗಲಾರದು. ಅವರು ಕೇವಲ ರಾಜಕೀಯ ಕೆಲಸಕಾರ್ಯಗಳನ್ನು ಮಾಡತಕ್ಕದ್ದಷ್ಟೇ ಅಲ್ಲ, ಸಾಮಾಜಿಕ ಭದ್ರತೆಯಲ್ಲಿ, ಸಾಮಾಜಿಕ ಜೀವನದಲ್ಲಿ, ಅದರ ಜವಾಬ್ದಾರಿಯಲ್ಲಿ ಭದ್ರವಾದ ಅಡಿಪಾಯಗಳಾಗಿರತಕ್ಕ ಸ್ಥಾನಗಳನ್ನಲಂಕರಿಸಿದ್ದಾರೆ. ಇವರಿಗೆ ಆಗಿರತಕ್ಕ ಅಸಮಾಧಾನ ಬಹಳ ಹೆಚ್ಚಾಗಿದೆ. ಬೇರೆ ಪ್ರಾಂತಗಳಿಂದ, ಬೇರೆ ಭಾಗಗಳಿಂದ ನೌಕರರಾಗಿ ಬಂದಿರುವವರ ಮತ್ತು ಇಲ್ಲಿಯವರ ಸಂಬಳ ಸಾರಿಗೆಗಳನ್ನು ಸರಿಪಡಿಸುವ ಜವಾಬ್ದಾರಿ ಎಷ್ಟುಮಟ್ಟಿಗಿದೆಯೋ, ಅದೇರೀತಿ ಇವರ ಬಗ್ಗೆಯೂ ಸರಕಾರದ ಜವಾಬ್ದಾರಿ ಇದೆ. ಇವರುಗಳ ಸಮಸ್ಯೆಯೂ ಅದೇ ರೀತಿಯಾಗಿದೆ. ವರ್ಷ ಒಂದಕ್ಕೆ ಒಂದೂಕಾಲು ರೂಪಾಯಿನಿಂದ ಹಿಡಿದು ನೂರನಲವತ್ತು ರೂಪಾಯಿಗಳವರೆಗೂ ಪೋಟಿಗಿ ಬರತಕ್ಕವನನ್ನು ಸರಕಾರಿ ಉದ್ಯೋಗಸ್ಥನೆಂಬುದಾಗಿ ಪರಿಗಣಿಸಬೇಕು ಎಂದರೆ ಮಾನವೀಯತೆಯ ದೃಷ್ಟಿಯಿಂದ ಹಾಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಪಟೇಲ, ಶ್ಯಾನುಭೋಗರ ಮತ್ತು ಸರಕಾರದ ದೃಷ್ಟಿಯಿಂದಕೂಡ ಈ ಸಮಸ್ಯೆಯನ್ನು ಬೇಗ ನಿವಾರಣೆ ಮಾಡಬೇಕು. ನಾನು ಭಯಕ್ಕ್ಯೋಸ್ಕರ ಹೇಳುತ್ತಿಲ್ಲ. ನಿಜವಾಗಿ ಆ ವರ್ಗ, ಹೊಡ್ಡದಾದ ವರ್ಗ, ಬಹಳ ಕಷ್ಟ ಪಟ್ಟಿದ್ದಾರೆ. ನಿಜವಾದ ದೇಶಸೇವಕರಾಗಿ, ಪ್ರಜಾನುರಾಗಿಗಳಾಗಿರತಕ್ಕ ಇವರನ್ನು ಅಭಿನಂದಿಸಬೇಕಾಗಿದೆ. ಈ ಸಮಯದಲ್ಲಿ, ಸ್ವಾಮಿ, ಮನಸ್ಸು ಬಿಚ್ಚಿ ಈ ಪ್ರಾರ್ಥನೆ ನಲ್ಲಿಸುತ್ತಿದ್ದೇನೆ. ಅದಷ್ಟು ಜಾಗ್ರತೆ ಈ ವರ್ಗಕ್ಕೆ ಸಂತೋಷವನ್ನುಂಟುಮಾಡಬೇಕು, ಸಮಾಧಾನ ತರಬೇಕು. ಇದನ್ನು ಕೇವಲ ಮಾನವೀಯತೆಯ ದೃಷ್ಟಿಯಿಂದ ನೋಡಬೇಕು. ಅವರು ಸಮಾಧಾನಚಿತ್ತರಾಗಿ ಕಳಕಳಿಯಿಂದ ಕೆಲಸಮಾಡುವವರಾಗಬೇಕು ಎಂದು ಹೇಳುತ್ತೇನೆ. ಒಂದಾನೊಂದು ಕಾಲದಲ್ಲಿ ಪಂಚಾಯಿತಿಗಳಿಗೆ ಕಂದಾಯ ವಸೂಲ್ಮಾಡತಕ್ಕ ಹಕ್ಕು ಕೊಡಬೇಕು. ಅದೇ ನಮ್ಮ ಆದರ್ಶ. ಆ

(ಶ್ರೀ ಕೆ. ಪಟ್ಟಾಭಿರಾಮನ್)

ಅದರ್ಶವನ್ನು ನಾವು ಮುಟ್ಟುವವರೆಗೂ ಕಂದಾಯ ಗಳನ್ನು ವಸೂಲ್ಮಾಡಲಿಕ್ಕೆ ಒಂದು ಸಿಬ್ಬಂದಿ ಇರಬೇಕಾದದ್ದು ಅನಿವಾರ್ಯ. ಇರಬೇಕು ಎನ್ನುವವರೆಗೂ ಅವರು ಈ ಸರಕಾರಕ್ಕೆ ಸೇವೆ ಮಾಡಿಕೊಂಡು ಇರ ಬೇಕಾಗಿದೆ. ಆದುದರಿಂದ ಇವರ ಬೇಡಿಕೆಗಳನ್ನು ಬಹಳ ಸಮಾಧಾನದಿಂದ ತೀರ್ಮಾನ ಮಾಡಬೇಕು.

ಮೊನ್ನೆ ಒಂದು ವಿಚಿತ್ರ ಪರಿಸ್ಥಿತಿ ನಡೆಯಿತು. ಪಟೇಲ್ ಶ್ಯಾನುಭೋಗರು " ನರ್ಕಾರಿ ಉದ್ಯೋಗಸ್ತರಲ್ಲಿ ಎಂದರೆ ನಾವೂಕೂಡ ಚುನಾವಣೆಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತೇವೆ ಅವಕಾಶ ಕೊಡಿ " ಎಂದು ಕೇಳಿದಂತೆ ಒಂದು ಪತ್ರಿಕೆಯಲ್ಲಿ ನಾನು ಓದಿದೆ. ಪ್ರಾಯಶಃ ಚೀಫ್ ಮಿನಿಸ್ಟರಿರಬಹುದು ಎಂದು ಕಾಣುತ್ತದೆ. ಅವರು, ಪಟೇಲ್ ಶ್ಯಾನುಭೋಗರು ಯಾರೂ ನರಕಾರದಿಂದ ನೇರವಾಗಿ ಸಂಬಳ ತೆಗೆದು ಕೊಳ್ಳುತ್ತಿಲ್ಲವೊ, ಆದ್ದರಿಂದ ಅವರು ಮಾತ್ರ ಅಸೆಂಬ್ಲಿಗೆ ನಿಂತುಕೊಳ್ಳಬಹುದು ಎಂದು ಹೇಳಿದರಂತೆ. ಇದು ಏಮರ್ಶೆಮಾಡಿ ಹೇಳಿದಂಥಾ ಜವಾಬು ಇರಲಾರದು ಅಥವಾ ಕಾನೂನು ದೃಷ್ಟಿ ಮುರೆತು ಅವರನ್ನು ನೋಡಲು ಬಂದಿರತಕ್ಕ ಜನಗಳನ್ನು ತಾತ್ಕಾಲಿಕವಾಗಿ ತೃಪ್ತಿ ಪಡಿಸಲಿಕ್ಕೆ ಹೇಳಿರಬಹುದು. ಅದು ಹೋಗಲಿ ಯಾವಾಗಲಾದರೂ ಅವರು ಉದ್ಯೋಗನ್ತರೇ ಆಗುತ್ತಾರೆ. ಅಂತೂ ಕೆಲವರು ಚುನಾವಣೆಗೆ ನಿಂತು ಅವರ ಅರ್ಜಿ ವಜಾ ಆಯಿತು ಎಂದು ಹೇಳುತ್ತಾರೆ. ಆ ಕಥೆ ಬೆಳೆಸುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ಅವರು part-time Government servants. . . .

ಶ್ರೀ ಪಟ್ಟಾಭಿರಾಮನ್.—ಆದರೂ ಸಹ ರೆಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆಕ್ಟಿನ ಯಾವ ನಿಬಂಧನೆಗೆ ಒಳಗಾಗುತ್ತದೆ ಎಂಬುದನ್ನು ಮಾನ್ಯ ಫೈನಾನ್ಸ್ ಮಿನಿಸ್ಟರು ಹೇಳಿದರೆ ನಾನು ಅವರಿಂದ ಶಾಸನವನ್ನು ಸ್ವಲ್ಪ ಕಲತುಕೊಳ್ಳುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಟಿ. ಮರಿಯಪ್ಪ.—ರೆಪ್ರೆಸೆಂಟೇಷನ್ ಆಫ್ ಪೀಪಲ್ಸ್ ಆಕ್ಟಿಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ಪಟ್ಟಾಭಿರಾಮನ್.—ಹಾಗಾದರೆ ಇನ್ನೂ ವಿಚಿತ್ರ. ಅದಕ್ಕೆ ಸಂಬಂಧಪಡದೇ ಪ್ಯೂನೂರು ವಿಧಾನ ಸಭೆಗೆ ಚುನಾಯಿಸುವುದಕ್ಕೆ ಅವಕಾಶವುಂಟು ಎಂದಾಯಿತು. ಅದುಹೇಗೆ!

ಶ್ರೀ ಟಿ. ಮರಿಯಪ್ಪ.—Part-time Government servants ಆಗಿ ಅವರು ಚುನಾವಣೆಗೆ ನಿಲ್ಲುವುದಕ್ಕಾಗುವುದಿಲ್ಲ.

"*Nugu Project.*—This was also sanctioned in the year 1946 at an estimated cost of Rs. 81 lakhs to irrigate an area of 20,000 acres . . . . Subsequently the design was revised. Mainly on account of the increased cost of labour and materials, the revised estimate went up to Rs. 224.25 lakhs."

ಈ ಮೂರು ಉದಾಹರಣೆಗಳಲ್ಲದೆ, ಈ ಸಮಿತಿಯವರು ಮೈಸೂರು ದೇಶದಲ್ಲಿ ಕನ್ನಂಬಾಡಿಕಟ್ಟೆ, ಕೃಷ್ಣರಾಜ ಸಾಗರ ರಿಜರ್ವಾಯರ್ ಎಂದೇನು ಹೇಳುತ್ತಾರೋ ಅದನ್ನೂ ಪರಿಶೀಲಿಸಬೇಕಾಗಿತ್ತು. ಈ ರಿಸರ್ವಾಯರ್ ಕಟ್ಟಿದಾಗಿನಿಂದ ಸುಮಾರು 50 ವರ್ಷಗಳ ವರೆಗೆ ನಡೆದಿರುವ ಪ್ರಾಜೆಕ್ಟುಗಳನ್ನೆಲ್ಲ ದೃಷ್ಟಿಯಲ್ಲಿಟ್ಟು ನೋಡಿದರೆ ಕೊನೆಗೆ ಒಂದಕ್ಕೆ ಎರಡರಷ್ಟಾಗುವುದಲ್ಲದೆ ಅದಕ್ಕಿಂತಲೂ ಮೀರಿ ಎಸ್ಟಿಮೇಟಿಗಿಂತ ಹೆಚ್ಚಾಗಿ ಖರ್ಚಾಗಿರುವುದು ಕಂಡುಬರುತ್ತದೆ. ಈ ಒಂದು ಅಪರಾಧವೇನಾಗಿದೆಯೆಂದು ಕೆಲವರು ಪರಿಗಣಿಸಿದ್ದಾರೋ ಅದು ಮೈಸೂರು ಸಂಸ್ಥಾನಕ್ಕೆ ಮಾತ್ರ ಅನ್ವಯಿಸತಕ್ಕದ್ದಲ್ಲ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಭಾಕ್ರ-ನಂಗಲ್, ಹಿರಾಕುಡ್ ಇಂಥ ದೊಡ್ಡದೊಡ್ಡ ಜಲಾಶಯಗಳಿಗಾಗಿ ಏನು ಎಸ್ಟಿಮೇಟ್ ಆಗಿತ್ತೋ ಅದು ರಿವೈಜ್ ಆಗಿ ಒಂದಕ್ಕೆ ಎರಡರಷ್ಟಾಗಿ, ಅನೇಕವೇಳೆ ಮೂರರಷ್ಟೂ ಆಗಿ, ಕೆಲಸ ನಡೆದಿದೆ. ಭಾಕ್ರ-ನಂಗಲ್ ಪ್ರಾಜೆಕ್ಟಿನ ಅಂಕಅಂಶ ಈ ದಿವಸ ನನ್ನ ಹತ್ತಿರ ಇಲ್ಲ. ಆದರೆ ಅದನ್ನು ಓದಿ ತಿಳಿದುಕೊಂಡಿದ್ದೇನೆ. ಮೊದಲು ಸುಮಾರು 100 ಕೋಟಿಗಳಿಗೆ ಅಂದಾಜಾಗಿದ್ದುದು 200-250 ಕೋಟಿ ರೂಪಾಯಿಗಳಿಗೇರಿದೆ. ಇಂಡಿಯಾ ದೇಶದಲ್ಲಿ ಎಲ್ಲೆಲ್ಲಿ ಪಿ.ಡಬ್ಲ್ಯು.ಡಿ ಇರಾಖೆಯಿದೆಯೋ ಅಲ್ಲೆಲ್ಲಾ ಮೊಟ್ಟಮೊದಲು ಅಂದಾಜೇನು ಮಾಡಿದ್ದಾರೋ ಅದು ಪ್ರಾಜೆಕ್ಟ್ ಮುಗಿಯುವವರೆಗೆ ಈ ರೀತಿ ಅಧಿಕವಾಗಿದೆ. ಹೀಗೆ ಇಂಡಿಯಾ ದೇಶಕ್ಕೆಲ್ಲ ಅನ್ವಯಿಸತಕ್ಕ ಏನೊಂದು ಅಪರಾಧವಿದೆಯೋ ಅದನ್ನು ವಿಧಾನಸೌಧದ ವಿಚಾರದಲ್ಲಿ ಮಾತ್ರ ಅನ್ವಯಿಸಿ ಉತ್ಪ್ರೇಕ್ಷೆಮಾಡಿ ಒಂದೇ ದೃಷ್ಟಿಯಿಂದ ವರದಿ ಕೊಡುವುದು ಸತ್ಯಕ್ಕೆ, ನ್ಯಾಯಕ್ಕೆ ಅನುಗುಣವಾಗಿಲ್ಲ. ಅಕೌಂಟ್ಸ್ ವಿಚಾರ ಇಷ್ಟು. ಈ ಮೈಸೂರು ದೇಶದಲ್ಲಿ ಎಷ್ಟು ಪ್ರಾಜೆಕ್ಟುಗಳು ಇದುವರೆಗೆ ಕಟ್ಟಲ್ಪಟ್ಟಿವೆಯೋ ಅಷ್ಟು ಪ್ರಾಜೆಕ್ಟುಗಳ ವಿಷಯದಲ್ಲೂ ಕೂಡ ವಿಧಾನಸೌಧದ ವಿಚಾರದಲ್ಲಿ ಮಾಡಿರುವ ಒಂದು ಆರೋಪಣೆಯು ಅನ್ವಯಿಸುತ್ತದೆ:

(ಶ್ರೀ ಕೆ. ಹನುಮಂತಯ್ಯ).

4 P.M.

ಈ ಅಪರಾಧಕ್ಕೆ ಏನು ಕಾರಣವೆಂಬುದನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಬಹುದಾಗಿತ್ತು. ವಿಚಾರಣಾನಪಿತಿಯವರು ಈ ಒಂದು ವಿಷಯವನ್ನು ಪ್ರಸ್ತಾಪಿಸಿ ಅದಕ್ಕೆ ಏನೇನೋ ಕಾರಣಗಳನ್ನು ಕೊಟ್ಟಿದ್ದಾರೆ: ವಿಧಾನ ಸೌಧದ ಕಟ್ಟಡಕ್ಕೆ ಸಂಬಂಧಪಟ್ಟ ಎಲ್ಲ ಅಕೌಂಟ್ಸುಗಳಲ್ಲೂ ಮೊದಲು ಇದ್ದಂಥ ಎಸ್ಟಿಮೇಟಿಗಿಂತ ಹೆಚ್ಚಾಗಿ ಖರ್ಚು ಆಗಿದ್ದರೂ ಯಾವದೇ ಅಕೌಂಟು ಅಪ್‌ಟು ಡೇಟಾಗಿ ಇಡಲ್ಪಟ್ಟಿಲ್ಲವೆಂದು ಹೇಳಿದ್ದಾರೆ. ಪ್ರತಿಯೊಂದು ಪ್ರಾಜೆಕ್ಟಿನಲ್ಲೂ ಅದು ಕಾರ್ಯಗತವಾಗುವ ಮುಂಚೆ ಈ ರೀತಿ ಆಗುತ್ತಿದೆ ಎಂಬುದನ್ನು ನಭೆಯ ಗಮನಕ್ಕೆ ನಾನು ತರುತ್ತಲೇ ಇದ್ದೆನು. ಇಂತಹ ಪ್ರಾಜೆಕ್ಟಿನಲ್ಲಿ ಇಷ್ಟಿಷ್ಟು ಎಸ್ಟಿಮೇಟಿಗಿಂತ ಹೆಚ್ಚು ಖರ್ಚು ಆಗಿದೆ, ಅಕೌಂಟ್ಸು ಈ ರೀತಿಯಾಗಿ ಇವೆ ಎಂದು ಒಂದು ಕಂಪೆರಿಟಿವ್ ಸ್ಟೇಟ್‌ಮೆಂಟನ್ನು ಕೊಟ್ಟು ನಿಷ್ಪಕ್ಷಪಾತವಾಗಿರುವ ಒಂದು ಚಿತ್ರವನ್ನು ಜನತೆಯ ಮುಂದೆ ಇಟ್ಟಿದ್ದರೆ, ಅದು ಸೌಜನ್ಯದಿಂದ ಕೂಡಿದ ಸತ್ಯ ಮಾರ್ಗಕ್ಕೆ ಅನುಗುಣವಾಗುತ್ತಿತ್ತು. ವಿಧಾನ ಸೌಧ ಕಟ್ಟಡ ಕಟ್ಟುವಂಥ ಮಹಾ ಅಪರಾಧ ಮಾಡಬಾರದಾಗಿತ್ತು ಎನ್ನುವಂತಹ ಒಂದು ಚಿತ್ರವನ್ನು ವರದಿಯಲ್ಲಿ ಚಿತ್ರಿಸಿ ಎಲ್ಲರ ಮುಂದೆ ಇಟ್ಟಿದ್ದಾರೆ. ವಿಧಾನ ಸೌಧದ ಕಾರ್ಯವನ್ನು ಕೈಕೊಳ್ಳುವ ಮೊದಲು, ಇದನ್ನು ಕಟ್ಟಿಸಬೇಕೆಂಬ ಬಗ್ಗೆ ಯೋಚನೆ ಬಂದಾಗ ನಾನು ಶಾಸನ ಸಭೆಯಲ್ಲಿ ಈ ಕಟ್ಟಡ ಕಟ್ಟಿಸುವ ಸ್ಥಳ, ಅದರ ಪ್ರಮಾಣ, ಅದರ ಸೌಂದರ್ಯ ಮುಂತಾದುವುಗಳ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಅದಕ್ಕೆ ಈ ಶಾಸನ ಸಭೆಯು ಪದೇ ಪದೇ ಬಡ್ಜೆಟ್ಟಿಗೆ ತನ್ನ ಒಪ್ಪಿಗೆಯನ್ನು ಕೊಟ್ಟಿದೆ. ವಿರೋಧ ಪಕ್ಷದ ನಾಯಕರಾದ ಶ್ರೀ ಇಮಾಮ್ ಸಾಹೇಬರು ಯಾವುದಕ್ಕೂ ಒಪ್ಪಿಗೆ ಕೊಡುತ್ತಿರಲಿಲ್ಲ. ವಿರೋಧ ಪಕ್ಷದವರ ದೃಷ್ಟಿ ಬೇರೆ ರೀತಿಯಾಗಿರುವುದೇ ಇದಕ್ಕೆ ಕಾರಣ. ದೋಷಗಳನ್ನೇ ಎಣಿಸಬೇಕೆಂದಿರುವಾಗ ನ್ಯಾಯವಾದ ಬಗ್ಗೆ ಹೆಚ್ಚು ವಿವರಗಳನ್ನು ಕೊಡುವುದಕ್ಕೆ ಆಗುವದಿಲ್ಲ. ಈಗ ಪ್ರಜಾ ಪ್ರಭುತ್ವದ ದಿವಸ. ಪ್ರಜಾಪ್ರಭುತ್ವದ ಪ್ರಕಾರ ಯಾವದು ಏನೇ ಪ್ರಶ್ನೆ ಇದ್ದರೂ ಕೂಡ ಅದನ್ನು ನಿರ್ಧರಿಸುವ ಹಕ್ಕು ಜನಗಳಿಗೆ ಸೇರಿದೆ ಎಂಬುದು ಸ್ಪಷ್ಟವಾಗಿ ಇದೆ. ಕಳೆದ ಐದು ವರ್ಷಗಳಲ್ಲಿ ಈ ಸಭೆಯು ಯಾವ ಯಾವ ಕಾರ್ಯಕಲಾಪಗಳನ್ನು ನಡೆಸಿದೆಯೋ ಅದಕ್ಕೆಲ್ಲಾ ಒಪ್ಪಿಗೆ ಕೊಟ್ಟಿದೆ. ಇದನ್ನು ಟೀಕಿಸುವುದರಲ್ಲಿ ಏನೂ ಪ್ರಯೋಜನವಿಲ್ಲ. ಇನ್ನು ಲೆಕ್ಕದ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಅಕೌಂಟ್ಸ್ ವಿಷಯದಲ್ಲಿ ತಪ್ಪುಗಳು ಆಗಬಹುದು. ಸ್ಪೆಷಲ್ ಇಂಜಿನಿಯರ್, ಚೀಫ್ ಇಂಜಿನಿಯರ್ ಇವರುಗಳು ಎಷ್ಟೇ ಸಿಬ್ಬಂದಿಯನ್ನು ಕೇಳಿದರೂ ಅದನ್ನು ಕೊಡುವ ಮನಸ್ಸು ಸರ್ಕಾರಕ್ಕೆ ಇತ್ತು. ಅವರು ಕೇಳಿದ ಎಲ್ಲ ಸಿಬ್ಬಂದಿಯನ್ನೂ ಕೊಡುತ್ತಾ ಬಂದರು. ಹೆಚ್ಚು ಸಿಬ್ಬಂದಿಯನ್ನು ಲೆಕ್ಕಬರೆಯಲು ಕೇಳಬೇಕೆಂಬುದು ಅವರ ಗಮನಕ್ಕೆ ಬರಲಿಲ್ಲವೆಂದು ಕಾಣುತ್ತದೆ. ನನ್ನ ಗಮನಕ್ಕೂ ಸಹ ಬರಲಿಲ್ಲ. ಸ್ಪೆಷಲ್ ಇಂಜಿನಿಯರವರ ಗಮನಕ್ಕೂ ಬರಲಿಲ್ಲ. ಇದನ್ನು ಯಾರೂ ನಿರೀಕ್ಷಿಸಿರಲಿಲ್ಲ; ಗವರ್ನಮೆಂಟ್ ರೂಲ್ಸ್‌ಪ್ರಕಾರ ಒಂದು ಡಿವಿಜನ್ನಿಗೆ ಎಷ್ಟು ಸಿಬ್ಬಂದಿ ಕೊಡುತ್ತಾರೆಯೋ ಅಷ್ಟು ಸಿಬ್ಬಂದಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೆವು. ಅಕೌಂಟ್ಸ್ ವಿಷಯವನ್ನು ಇಡುವುದಕ್ಕೆ ಅಷ್ಟು ಸಿಬ್ಬಂದಿಯು ಸಾಕಾದಷ್ಟು ಆಗುವದೆಂದು ಭಾವಿಸಲಾಗಿತ್ತು. ಅಕೌಂಟೆಂಟ್ ಜನರಲ್ಲರು ಲೆಕ್ಕಪತ್ರಗಳನ್ನು ತಪಾಸು ಮಾಡಿ ನೋಡಿ, ಏನು ಹೆಚ್ಚು ವಿವರಗಳನ್ನು ಇಡಬೇಕೆಂದು ತಿಳಿಸಿದರೋ ಅಷ್ಟನ್ನು ಇಡುವುದಕ್ಕಾಗಿ ಹೆಚ್ಚಿನ ಸಿಬ್ಬಂದಿಯನ್ನು ತಕ್ಷಣ ಸರ್ಕಾರವು ಮಂಜೂರು ಮಾಡಿದೆ. ನನಗೂ ಹಾಗೆಯೇ ಎನಿಸಿದ್ದರಿಂದ ಅಕೌಂಟೆಂಟ್ ಜನರಲ್ಲರು ಸಿಬ್ಬಂದಿ ಹೆಚ್ಚು ಬೇಕು ಎಂದು ನೂಚಿಸಿದಾಗ ಸ್ಪೆಷಲ್ ಇಂಜಿನಿಯರರು ಅಷ್ಟು ಬೇಕು ಎಂದು ಯಾವಾಗ ಕೇಳಿದರೋ ಆಗ ಅಷ್ಟು ಕೊಟ್ಟಿದೆ. ಇದು ನನ್ನ ಅಪರಾಧವೂ ಅಲ್ಲ, ಸರ್ಕಾರದ ಅಪರಾಧವೂ ಅಲ್ಲ. ಅಕೌಂಟ್ಸ್ ವಿಷಯದ ಬಗ್ಗೆ ಇಷ್ಟು ಮಾತ್ರ ನಾನು ಹೇಳಬಲ್ಲೆ. ಏನೂ ಅನ್ಯಾಯ ಆಗಿಲ್ಲ. ಅಚಾತುರ್ಯವು ನಡೆದಿಲ್ಲ. ಅಕೌಂಟ್ಸ್ ಸ್ಟಾಫಿನಲ್ಲಿ ಟ್ರೇನ್ಡ್ ಮತ್ತು ಎಕ್ಸ್‌ಪಿರಿಯನ್ಸ್ ಆದವರು ಇರಲಿಲ್ಲ. ಲೆಕ್ಕ ಪತ್ರಗಳಲ್ಲಿ ಏನೂ ಅನ್ಯಾಯವಾಗಿಲ್ಲ. ಬಹುಮಟ್ಟಿಗೆ ಇದಕ್ಕೆಲ್ಲ ಪರಿಸ್ಥಿತಿಯೇ ಕಾರಣ. ಲೆಕ್ಕವನ್ನು ಒಂದೇ ಘನ್ತಕದಲ್ಲಿ ಬರೆದಿಲ್ಲ. ರಿಜಿಸ್ಟರುಗಳನ್ನು ಅಪ್-ಟು-ಡೇಟಾಗಿ ಇಟ್ಟಿಲ್ಲ. ಖರ್ಚು ಮಾಡಿದ ಹಣಕ್ಕೆ ಏನೇನು ವೌಚರ್ಸ್, ರಸೀತಿಗಳು ಇರಬೇಕೋ ಅವೆಲ್ಲಾ ಇವೆ. ಅವೆಲ್ಲವುಗಳನ್ನು ಸರಿಯಾದ ಪದ್ಧತಿಯಲ್ಲಿ ಅಪ್-ಟು-ಡೇಟಾಗಿ ಪುನ್ತಕದಲ್ಲಿ ಬರೆಯುವುದಕ್ಕೆ ಸ್ವಲ್ಪ ನಿಧಾನವಾಗುತ್ತದೆ. ಅನಂತರ ನೋಡಿದರೆ ಗೊತ್ತಾಗುವುದು. ಈಗ ಲೆಕ್ಕ ಬರೆಯುವ ಕೆಲಸ ನಡೆಯುತ್ತಲಿದೆ. ಸ್ವಲ್ಪ ಕಾಲದಲ್ಲಿ ಎಲ್ಲ ಲೆಕ್ಕಗಳೂ ಬರೆಯಲ್ಪಟ್ಟ ಮೇಲೆ ಸಮರ್ಪಕವಾಗಿ ಆಗಿದೆ ಎಂಬುದು ಕಂಡುಬರಬಹುದೆಂದು ನಾನು ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಅಕೌಂಟ್ಸ್ ಸರಿಯಾಗಿಲ್ಲ ಎಂಬ ಆಕ್ಷೇಪಣೆಯನ್ನು ಸಮಿತಿಯವರು ಎತ್ತಿದ್ದಾರೆ. ಅಕೌಂಟ್ಸ್‌ನಲ್ಲಿ ಖರ್ಚು ಆದದ್ದು ಸರಿಯಾಗಿ ಇದೆಯೋ ಇಲ್ಲವೋ. ಅಥವಾ ಹಣವು ಏನಾದರೂ ದುರ್ವಿನಿಯೋಗ ಆಗಿದೆಯೇ ಎಂಬುದನ್ನು ವಿಚಾರ ಮಾಡದೆ ತಮ್ಮ ವ್ಯಾಪ್ತಿಗೆ ಬಾರದೆ ಇದ್ದ ಮಿಕ್ಕ ಎಲ್ಲ ಕೆಲಸಗಳನ್ನೂ ಮಾಡಿದ್ದಾರೆ. It is outside the scope of the Committee. Any impartial member who reads the Report will find that they have done anything other than what was entrusted to them. ಏಳು ಎಂಟು ಪಟ್ಟಿಗಳನ್ನು ಹಾಕಿ ಎಂಟು ಹತ್ತು ನ್ಯೂನತೆಗಳನ್ನು ಹೇಳಿದ್ದಾರೆ. ಅವುಗಳನ್ನು ಕಂಡುಹಿಡಿಯುವ ಪ್ರಯತ್ನಕ್ಕೆ ಹೋಗಲಿಲ್ಲ. ಅಕೌಂಟೆಂಟ್ ಜನರಲ್ ಅವರು ಕಂಡುಹಿಡಿದು ಕೊಟ್ಟಿರುವ ಪಟ್ಟಿಯನ್ನೇ ಪುನಃ ಸಮಿತಿಯವರು reproduce ಮಾಡಿದ್ದಾರೆ. ಈ ಕೆಲಸವು ದಕ್ಷತೆಯಿಂದಲೂ, ಪ್ರಾಮಾಣಿಕತೆಯಿಂದಲೂ ನಡೆದಿದೆ ಎಂಬುದು ಇಡಿಯ ಪ್ರಪಂಚಕ್ಕೆ ಸ್ಪಷ್ಟವಾಗಿದೆ. ಈ ಲೆಕ್ಕದ ವಿಚಾರದಲ್ಲಿ ಏನಾದರೂ ತಪ್ಪು ಇದೆಯೇ, ಪ್ರತಿಯೊಂದು ಐಟೆಮ್ಮನ್ನೂ ನೋಡಿ ಪರಿಶೀಲಿಸಿ ಅದು ಸರಿಯಾಗಿ ನಮೂದು ಆಗಿದೆಯೇ ಎಂಬುದನ್ನು ಮಾಡಿಲ್ಲ. ಯಾವ ಶ್ರಮವನ್ನೂ ವಹಿಸದೆ ಅಕೌಂಟೆಂಟ್ ಜನರಲ್ಲರು ಬರೆದದ್ದನ್ನು ಕಾಪೀ ಮಾಡಿದ್ದಾರೆ. ಲೆಕ್ಕದಲ್ಲಿ ಏನಾದರೂ ಹಣದ ಥಪಾವಣೆಯು ಆಗಿದೆಯೇ 'misappropriation' ದುರ್ವಿನಿಯೋಗವಾಗಿದೆಯೇ ನ್ಯೂನಾತಿರಿಕ್ತಗಳು ಇವೆಯೇ ಎಂಬುದನ್ನು ಕಂಡು ಹಿಡಿಯಲು ರಿಟೈಯರ್ಡ್ ಹೈಕೋರ್ಟ್ ನ್ಯಾಯಾಧೀಶರೊಬ್ಬರನ್ನು ಈ ಸಮಿತಿಯ ಚೇರ್‌ಮೆನ್ನರನ್ನಾಗಿ ನೇಮಿಸಲಾಯಿತು. ಏಕೆಂದರೆ ತಪ್ಪುಗಳನ್ನು ಕಂಡ

ಹಿಡಿಯುವುದೇ ಅವರ ಕನಬು. ಆ ಸಮಿತಿಯಮೇಲೆ ಫೈನಾನ್ಸಿಯಲ್ ಎಕ್ಸ್‌ಪರ್ಟ್ ಆದವರು ಒಬ್ಬರು ಮತ್ತು ಎಂಜಿನಿಯರಾದವರೂ ಒಬ್ಬರು ಹೀಗೆ ಮತ್ತೆ ಇಬ್ಬರು ಸದಸ್ಯರನ್ನು ನೇಮಿಸಲಾಯಿತು. ಇಂತಹ ಆಪಾದನೆಗಳನ್ನು ಹೊರಿಸುವುದಕ್ಕಾಗಿ ಈ ಸಮಿತಿಯನ್ನು ನೇಮಿಸಲಿಲ್ಲ. ಸಮಿತಿಯು ತಮ್ಮ ಎಲ್ಲೆ ಮೀರಿ ಕಾರ್ಯವನ್ನು ಮಾಡಿದೆ.

ಈ ವಿಧಾನಸೌಧದ ಕಟ್ಟಡ ಬಹಳ ದೊಡ್ಡದಾಗಿದೆ ಎನ್ನತಕ್ಕ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ ಮತ್ತು ಅಷ್ಟು ದೊಡ್ಡ ಬಿಲ್ಡಿಂಗು ಆವಶ್ಯಕವಾಗಿತ್ತೆ ಎಂದೂ ಪ್ರಶ್ನಿಸಿದ್ದಾರೆ. ಇಷ್ಟು ದೊಡ್ಡದಾಗಿರತಕ್ಕ ಕಟ್ಟಡವನ್ನು ಏಕೆ ಕಟ್ಟಬೇಕಾಗಿತ್ತು, ಇದು ಅನಾವಶ್ಯಕವಾಗಿತ್ತು ಎನ್ನುವುದು ಇನ್ನೊಂದು ವಿಷಯ. ಈಗ ಕಟ್ಟಡದಲ್ಲಿ ಕಣ್ಣಿಟ್ಟು ನೋಡಿದರೆ ಯಾವ ಭಾಗದ ಕಟ್ಟಡವೂ ಉಪಯೋಗವಾಗದೆ ಖಾಲಿ ಬಿದ್ದಿಲ್ಲ. ಇದರ ಜೊತೆಗೆ ಇನ್ನೂ ಕೆಲವು ಆಫೀಸುಗಳು ಬಾಡಿಗೆ ಮನೆಯಲ್ಲಿಯೇ ಇರಬೇಕಾಗಿ ಬಂದಿದೆ. ಇದರಿಂದ ನಮ್ಮ ಆವಶ್ಯಕತೆಗಳು ನ್ಯಯಂ ವೇದ್ಯವಾಗಿವೆ. ಇಂತಹ ಒಂದು ಕಟ್ಟಡ ಕಟ್ಟಿದ ಮಾತ್ರಕ್ಕೇ ಆರೋಪಣೆ ಮಾಡದೆ, ವಾಸ್ತವಾಂಶಗಳನ್ನು ಪರಿಶೀಲಿಸಿ ಕಣ್ಣಿನಿಂದ ನೋಡಿ ಅಭಿಪ್ರಾಯವನ್ನು ಕೊಡಬೇಕು. ಈ ಬಿಲ್ಡಿಂಗು ಇನ್ನೂ ಉತ್ತರಕ್ಕೆ ಇರಬೇಕಾಗಿತ್ತು ಎಂದು ಕೂಡ ಅವರು ಹೇಳುತ್ತಿದ್ದಾರೆ. ಈ ಕಟ್ಟಡವನ್ನು ಇಲ್ಲಿಯೇ ಕಟ್ಟುವುದಕ್ಕೆ ಮುಖ್ಯವಾಗಿ ಎರಡು ಕಾರಣಗಳಿವೆ. ಮೊದಲನೆಯದು ನಮ್ಮ ಪ್ರೈಮ್ ಮಿನಿಸ್ಟರ್ ಅವರು ಈ ಕಟ್ಟಡಕ್ಕೆ ಅಸ್ತಿಭಾರ ಹಾಕಿದ್ದು ಇಲ್ಲಿಯೇ, ಎರಡನೆಯದು ಮುಂದೆಯಿರುವ ಅಥಾರಾ ಕಚೇರಿಗೂ ಮತ್ತು ಈ ಬಿಲ್ಡಿಂಗಿಗೂ ಒಂದು ಸಿಮೆಟ್ರಿ ಮಾದರಿಯಲ್ಲಿ ಪದ್ಯದಲ್ಲಿ ಪ್ರಾಸವಿರುವಂತೆ ಕಟ್ಟಿ ಇದರ ಮಧ್ಯೆ ಓಡಾಡುವುದಕ್ಕೆ ರಸ್ತೆಗಳು ಬಂದರೆ ನೋಡುವುದಕ್ಕೆ ಸುಂದರವಾಗಿ ಕಾಣುತ್ತದೆ ಎಂಬುದು. ಮಾನ್ಯ ಸಭಿಕರು ಹೇಳಿದಂತೆ, ಈ ಕಟ್ಟಡವನ್ನು ಇನ್ನೂ ಉತ್ತರಕ್ಕೆ ಹಾಕಿಬಿಟ್ಟರೆ ಈಗಿರತಕ್ಕ ರೆಸಿಡೆನ್ಸಿಯನ್ನು ಒಡೆದುಹಾಕಬೇಕಾಗುತ್ತಿತ್ತು. ಇದರ ಸುತ್ತಲೂ ಓಡಾಡುವುದಕ್ಕೆ ಅನುಕೂಲವಾಗುವ ಹಾಗೆ ರಸ್ತೆಗಳನ್ನು ಮಾಡಬೇಕಾದದ್ದು ಆವಶ್ಯಕವಾಗಿದೆ. ಆದರೆ ರೆಸಿಡೆನ್ಸಿಯನ್ನು ಒಡೆದುಹಾಕುವುದು ಅಷ್ಟು ಚೆನ್ನಾಗಿರುವುದಿಲ್ಲ ಎಂದು ತಿಳಿದು ಇಲ್ಲಿಯೇ ಕಟ್ಟಲಾಯಿತು. ಇಷ್ಟು ಸುಲಭವಾಗಿರುವುದನ್ನು ಅರ್ಥ ಮಾಡಿಕೊಳ್ಳದೆ ಏನೋ ಒಂದು ರೀತಿಯ ದೊಡ್ಡ ಆರೋಪಣೆಯನ್ನು ಮಾಡಿದ್ದಾರೆ. ಸಮಿತಿಯವರು ಯಾವುದನ್ನೂ ಪರಿಶೀಲನೆ ಮಾಡಿಲ್ಲ. ಅವರು ಒಂದು ನಿಷ್ಪಕ್ಷಪಾತವಾದ ವರದಿಯನ್ನು ಕೊಡಬೇಕಾಗಿತ್ತು. ಏನೋ ಮನಸ್ಸಿಗೆ ಬಂದಂತೆ ಆರೋಪಣೆಗಳನ್ನು ಮಾಡಬೇಕು ಎನ್ನುವ ಆತುರತೆಯಿಂದ ಮಾಡಿದ್ದಾರೆ ಎನ್ನುವುದು ಇಲ್ಲಿ ಸ್ಪಷ್ಟವಾಗಿದೆ. ಈ ಬಿಲ್ಡಿಂಗಿಗೆ 160 ಲಕ್ಷ ರೂಪಾಯಿಗಳ ದೊಡ್ಡ ಮೊಬಲಗನ್ನು ತೋರಿಸಿ ಇದು ಬಹಳ ದುಂದುವೆಚ್ಚವಾಗಿದೆ ಎಂದು ಹೇಳಿದ್ದಾರೆ. ಇದರಲ್ಲಿ ದುಂದು ವೆಚ್ಚವಾಗಿದೆಯೇ ಇಲ್ಲವೇ ಲೆಕ್ಕಪತ್ರಗಳು ಸರಿಯಾಗಿವೆಯೇ ಇಲ್ಲವೇ, ಹುದ್ದು ನ್ಯಾಯವಾಗಿ ಖರ್ಚುಮಾಡಲಾಗಿದೆಯೇ ಇಲ್ಲವೇ ಇದನ್ನೆಲ್ಲ ಪರೀಕ್ಷೆ ಮಾಡಿ ಒಂದು ಅಡಿಗಲ್ಲನ್ನು ಇಟ್ಟು ಕೊಂಡು ಪರಿಶೀಲನೆ ಮಾಡಿದ್ದರೆ ಒಪ್ಪಬೇಕು. ಈ ತರಹದ ಕಟ್ಟಡಕ್ಕೆ ಚದರ ಅಡಿಗೆ ಎಷ್ಟು ಖರ್ಚು ಆಗುತ್ತದೆ ಎಂಬುದನ್ನು ಯಾವನಾದರೂ ಒಬ್ಬ ಕಂಟ್ರಾಕ್ಟರನ್ನನ್ನಾಗಲಿ, ಇಂಜನೀಯರನನ್ನಾಗಲಿ ಕೇಳಿದ್ದರೆ ಇಂತಹ ಬಿಲ್ಡಿಂಗಿಗೆ ಖರ್ಚು ಕಡಮೆಯಾಗುತ್ತದೋ ಜಾಸ್ತಿಯಾಗುತ್ತದೋ ತಿಳಿಯುತ್ತಿತ್ತು. ಈ ರೀತಿ ಲೆಕ್ಕ ಮಾಡಿ ಇಂತಹ ಒಂದು ಸೌಂದರ್ಯದಿಂದ ಕೂಡಿದ ಕಟ್ಟಡವನ್ನು ಕಟ್ಟಲು ಬಿದ್ದಿರತಕ್ಕಂಥ ಖರ್ಚು ಒಂದು ಚದರ ಗಜಕ್ಕೆ ಇಪ್ಪತ್ತು ರೂಪಾಯಿಗಳು ಎಂದು ಕೆಲವೆಡೆ ಲೆಕ್ಕಹಾಕಿದ್ದಾರೆ. ಅದೇ ರೀತಿ Architectural features ಇರುವಂತಹದು ಗೌರ್ಮೆಂಟ್ ಆಫ್ ಇಂಡಿಯ ಬಿಲ್ಡಿಂಗ್ ಸುಮಾರು 20 ರಿಂದ 25 ರೂಪಾಯಿಗಳಾಗುತ್ತದೆಂದು ಲೆಕ್ಕಹಾಕಿದ್ದಾರೆ. ಆದರೆ ಈ ಸಮಿತಿಯವರು ಮಾಡುತ್ತಿರುವ ಪರೀಕ್ಷೆಯಲ್ಲಿ ಆ ರೀತಿಯ Touchstone ಅನ್ನು ಅನುಸರಿಸದೆ ಏಕಪಕ್ಷೀಯವಾಗಿ ಬಿಲ್ಡಿಂಗಿಗೆ ಹೆಚ್ಚು ಖರ್ಚಾಗಿದೆ ಎಂದು ಹೇಳಿದ್ದಾರೆ. ನಾನು ಈ ಕಟ್ಟಡವನ್ನು ಕಟ್ಟಿಸುವುದಕ್ಕೆ ಮುಂಚೆ ಬಹಳ ಕಟ್ಟಡಗಳನ್ನು ನೋಡಿದ್ದೆ. ಅದೇನು ದೈವಲೀಲೆಯೋ ಏನೋ, ನಾನು ಪ್ರಪಂಚದಲ್ಲಿ ಇರತಕ್ಕಂಥ ಪ್ರಮುಖವಾದ ಪಾರ್ಲಿಮೆಂಟು ಬಿಲ್ಡಿಂಗ್‌ಗಳನ್ನೆಲ್ಲಾ ನೋಡಿದ್ದೇನೆ. ಲಂಡನ್ನಿನಲ್ಲಿರತಕ್ಕ ಉಭಯಶಾಸನಸಭಾಭವನಗಳನ್ನು ನೋಡಿದ್ದೇನೆ. ಇದಲ್ಲದೆ, ನಾರ್ವೆ ಸ್ವೀಡನ್ನಿಗೂ ಹೋಗಿದ್ದೆ ಮತ್ತು ಇಂಡಿಯಾದೇಶದಲ್ಲಿರತಕ್ಕ ಪ್ರಮುಖ ನಗರಗಳನ್ನೆಲ್ಲ, ಎಂದರೆ, ಮುಂಬಯಿ, ಡೆಲ್ಲಿ ಮುಂತಾದ ಕಡೆಗಳಲ್ಲಿರುವ ಬಿಲ್ಡಿಂಗುಗಳನ್ನು ನೋಡಿಕೊಂಡು ಬಂದೆ. ಈ ರೀತಿ ಎಲ್ಲ ತರಹದ ಕಟ್ಟಡಗಳನ್ನು ನೋಡಿ ನನ್ನ ಮನಸ್ಸಿಗೆ ಬಂದ ಒಂದು ಕಲ್ಪನಾ ಚಿತ್ರವನ್ನು ಕಾರ್ಯರೂಪಕ್ಕೆ ತಂದೆ ಅಷ್ಟೇ. ಒಂದು ಜೇನುಹುಳ ಅನೇಕ ಹೂವುಗಳಿಂದ ಸೌರಭವನ್ನು ಆರಿಸಿ ಒಂದು ಜೇನುತುಪ್ಪದ ಕೊಡವನ್ನು ಹೇಗೆ ಕೊಡುತ್ತದೆಯೋ ಹಾಗೆ ನಾನು ಒಂದು ಸದ್ಭಾವನೆಯಿಂದ ಮಾಡಿದೆ. ಇಂತಹದನ್ನು ಇಲ್ಲಿ ತಂದು ಮಿಕ್ಸ್‌ಮಾಡಿ ಮಾತನಾಡಿರುವುದು ಸರಿಯಾಗಿಲ್ಲ. ಯಾವುದೋ ಒಂದು ಪುಷ್ಪದಿಂದ ತಂದ ಜೇನು ಸಿಹಿಯಾಗಿಲ್ಲ ಎಂದು ಹೇಳುವುದು, ಅದು ಅಭಿರುಚಿಯ ಮಾತು. ಅದು ಹಾಗಿರಲಿ.

ಹಿಂದೆ 1952 ನೆಯ ಇಸವಿಯಲ್ಲಿ ನನ್ನ ಹಿಂದೆ ಇದ್ದ ಶ್ರೀಮಾನ್ ಕೆ. ಸಿ. ರೆಡ್ಡಿಯವರು ಒಂದು ಪ್ಲಾನನ್ನು ತಯಾರಿಸಿದ್ದರು. ಅದೂ ಬಹಳ ಚೆನ್ನಾಗಿತ್ತು. ಖರ್ಚು ಕಡಮೆಯಾಗಿತ್ತು. ಅದಕ್ಕೂ ಇದಕ್ಕೂ ಹೋಲಿಸಿ, ಈ ಎರಡು ಪ್ಲಾನುಗಳೂ ಯಾವ ಯಾವ ರೀತಿಯಲ್ಲಿ ಚೆನ್ನಾಗಿದ್ದುವು ಎಂಬುದನ್ನು ಪ್ರಸ್ತಾಪಿಸುತ್ತೇನೆ.

The building is said to have cost an enormous amount. Mr. K. C. Reddy Ministry's plan of the building had a floor area of 1,74,600 sq. ft. Its estimated cost was 33 lakhs of rupees. The Vidhana Soudha has nearly five lakhs of sq. ft. of floor area and has cost about 160 lakhs. The former was a brick building with no architectural decorations. The Vidhana Soudha is a dressed stone building with many architectural features. In April 1952, when the estimate for the former building was prepared, the prices and wages were not as high as they were during the time of the construction of Vidhana Soudha. When so compared

(ಶ್ರೀ ಕೆ. ಹನುಮಂತಯ್ಯ)

with the cost of the original plan of Mr. K. C. Reddy's Ministry, it will show to any impartial minid that the cost of the Vidhana Soudha is cheaper. ಇನ್ನೊಂದು ವಿಷಯ. ಈ ವಿಧಾನಸೌಧದಂತಹ ಒಂದು ಕಟ್ಟಡ ಚಂಡಿಘರ್‌ನಲ್ಲಿದೆ. ಈ ಚಂಡಿಘರ್ ಪಂಜಾಬಿನಲ್ಲಿದೆ. ಈ ವಿಧಾನಸೌಧದ ಅರ್ಧಮುಕ್ಕಾಲರಷ್ಟು ಕೆಲಸವಾಗಿದ್ದಾಗ ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ಸೆಕ್ರೆಟೇರಿಯಟ್ ಬಿಲ್ಡಿಂಗ್ ಮತ್ತು ಪಾರ್ಲಿಮೆಂಟು ಕಟ್ಟಡಗಳನ್ನು ಕಟ್ಟಿಸುತ್ತಿದ್ದರು. ಅವುಗಳನ್ನೆಲ್ಲಾ ನೋಡಿಕೊಂಡುಬರಲು ನಾನೂ ಹೋಗಿದ್ದೆ. ಅಲ್ಲಿಯ ಚೀಫ್ ಮಿನಿಸ್ಟರು ನನಗೆ ಆಮಂತ್ರಣವನ್ನಿತ್ತು ಟೀ ಕೂಡ ಕೊಟ್ಟರು. ಆಗ ಆ ಕಟ್ಟಡಗಳಿಗೆ ಆಗಿದ್ದ ಖರ್ಚನ್ನು ವಿಚಾರಿಸಿದ್ದರಲ್ಲಿ ಬಿಲ್ಡಿಂಗ್ ಕಾನ್ಸ್ಟ್ರಮೇಲೆ ಅಲ್ಲಿ ಕಂಟ್ರಾಕ್ಟರುಗಳಿಗೆ ಮೂರು ಪರ್ಸೆಂಟು ಫೀಸನ್ನು ಕೊಡುತ್ತಾರೆ ಎಂದು ಹೇಳಿದರು. ಅದೆಲ್ಲಾ ಸೇರಿ ನುಮಾರು ಎರಡು ಮೂರು ಕೋಟಿಗಳ ಮೇಲಾಗುತ್ತದೆ. ಎಲ್ಲ ಆರ್ಕಿಟೆಕ್ಚರಲ್ ಫೀಚರುಗಳನ್ನೊಳಗೊಂಡ ಒಂದು ಭವ್ಯವಾದ ಭವನವನ್ನು ಅಲ್ಲಿ ನಿರ್ಮಾಣ ಮಾಡಿದ್ದಾರೆ. ಆದರೆ ಆ ಕಟ್ಟಡಗಳು ಚೆನ್ನಾಗಿಪೆಯೇ ಇಲ್ಲವೇ ಎಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪಂಜಾಬಿನ ಅಸೆಂಬ್ಲಿ ಸ್ಪೀಕರ್ ಅವರು ಇಲ್ಲಿಯ ಈ ವಿಧಾನ ಸೌಧವನ್ನು ನೋಡಿ ಇಂತಹ ಸುಂದರವಾದ ಕಟ್ಟಡ ಇನ್ನೆಲ್ಲಿಯೂ ಇಲ್ಲ, ಚಂಡಿಘರ್ ಕಟ್ಟಡಗಳಿಗಿಂತ ಉತ್ತಮವಾಗಿದೆ ಎಂದು ಪ್ರಶಂಸೆಮಾಡಿ ಬರೆದಿದ್ದಾರೆ. "ನಮ್ಮ ಭಾರತದ ಇಂಜನಿಯರುಗಳಿಗೆ ಪರಕೀಯ ಇಂಜನಿಯರುಗಳಿಗಿಂತಲೂ ಮೇಲಾದ ಕಟ್ಟಡಗಳನ್ನು ಕಟ್ಟಿಸತಕ್ಕ ಶಕ್ತಿ ಇದೆ. ಈ ವಿಧಾನ ಸೌಧದ ಖರ್ಚು ಕಟ್ಟಡಕ್ಕಿಂತ ಕಡಮೆ ಪ್ರಮಾಣದಲ್ಲಿದೆ". ಎಂದು ಬರೆದಿದ್ದಾರೆ. ನಾನೊಂದು ಸಲ ಚಂಡಿಘರ್ ಹೈಕೋರ್ಟ್ ನೋಡುವುದಕ್ಕೆ ಹೋದೆ. ಅಲ್ಲಿನ ಚೀಫ್ ಜಸ್ಟಿಸ್‌ಅವರು ನನ್ನನ್ನು ಬರಮಾಡಿಕೊಂಡು ಕಟ್ಟಡವನ್ನು ತೋರಿಸಿ "ಈ ಕಟ್ಟಡ ನಮಗೊಬ್ಬರಿಗೂ ಒಪ್ಪಿಗೆ ಇಲ್ಲ" ಎಂದು ಹೇಳಿದರು. ನಾನು ಚಂಡಿಘರ್ ರಾಜಧಾನಿಯನ್ನಾಗಲಿ, ಅಲ್ಲಿನ ಕಟ್ಟಡಗಳನ್ನಾಗಲಿ ಟೀಕಿನಬೇಕೆಂಬ ಉದ್ದೇಶದಿಂದ ಹೇಳುತ್ತಿಲ್ಲ. ಈ ವಿಧಾನಸೌಧ ಕಟ್ಟಡವನ್ನು ಅಲ್ಲಿಯ ಕಟ್ಟಡಗಳೊಡನೆ ಹೋಲಿಸಿ ನೋಡಿದರೆ ನಮ್ಮ ಕಟ್ಟಡವು ಎಲ್ಲ ದೃಷ್ಟಿಯಿಂದಲೂ ಉತ್ತಮ ಮಟ್ಟದ್ದಾಗಿದೆ ಎಂಬ ನಿರ್ವಿವಾದವಾದ ವಿಷಯವನ್ನು ಸಭೆಯ ಮುಂದೆ ಪ್ರತಿಪಾದಿಸುವುದ ಕ್ಕೋಸ್ಕರ ಹೇಳುತ್ತಿದ್ದೇನೆ. ನನ್ನ ಸ್ನೇಹಿತರಾದ ಶ್ರೀ ಇಮಾಂ ಅವರು ದೆಹಲಯ ಲೋಕಸಭೆಗೆ ಹೋಗುತ್ತಾರೆ. ದೆಹಲಯಲ್ಲಿ ಅವರ ಕಾರ್ಯ ಕಲಾಪಗಳು ಯಶಸ್ವಿಯಾಗಿ ನಡೆಯಲಿ ಎಂದು ಆಶಿಸುತ್ತೇನೆ. ಅವರು ಈ ಕಟ್ಟಡಕ್ಕೆ ತಗುಲಿರುವ ಖರ್ಚು ವೆಚ್ಚಗಳೇನು ಇತ್ಯಾದಿ ವಿವರಗಳನ್ನೂ ಮತ್ತು ಕಟ್ಟಡದ ನಕ್ಷೆವಗೈರೆಗಳನ್ನೂ ತಮ್ಮ ಸಂಗಡ ತೆಗೆದು ಕೊಂಡು ಹೋಗಿ, ದೆಹಲಿಗೆ ಚಂಡಿಘರ್ ಸಮಾಸ ವಾಗಿರುವುದರಿಂದ ಅಲ್ಲಿಗೂ ಹೋಗಿ, ಈ ವಿಧಾನ ಸೌಧದ ಖರ್ಚು ಏನು, ಅಲ್ಲಿ ಕಟ್ಟಿರತಕ್ಕ ಕಟ್ಟಡಗಳ ಖರ್ಚು ಏನು, ಎಲ್ಲಿ ಮಾಡಿರುವ ಕೆಲಸ ತೃಪ್ತಿಕರ ವಾಗಿದೆ ಎಂದು ಒಂದು ಹೇಳಿಕೆಯನ್ನು ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಅವರು ವಿಧಾನಸಭೆಯ ಇನ್ನೊಂದು ಅಧಿವೇಶನ ಕೂಡುವಾಗ ಇರುವುದಿಲ್ಲವಾದ್ದರಿಂದ 'ಈ ಸಭೆಯಲ್ಲಿ ಭಾಷಣ ಮಾಡುವುದಕ್ಕಾಗುವುದಿಲ್ಲ. ಶ್ರೀ ಇಮಾಂ ಅವರು "ಮೈಸೂರು ದೇಶದ ಸೇವೆ ಮಾಡುವುದು ನನ್ನ ಧ್ಯೇಯ "ವೆಂದು ಹೇಳಿದರು. ಅದಕ್ಕನುಗುಣವಾಗಿ ಅಲ್ಲಿ ಹೋಗಿ ಅಲ್ಲಿಯೂ ನೋಡಿ ಒಂದು ಹೇಳಿಕೆಯನ್ನು ಕೊಟ್ಟರೆ ಎಲ್ಲರಿಗೂ ಉಪಕಾರವಾಗುತ್ತದೆ.

ಮತ್ತೊಂದು ಆಕ್ಷೇಪಣೆ ಏನೆಂದರೆ, ಅನೇಕ architectural features ಏನಿವೆ ಅವು ಬರಿಯ ನೋಟಕ್ಕೊಸ್ಕರ ಆಗಿವೆಯೇ ಹೊರತು ಉಪಯೋಗಕ್ಕೊಸ್ಕರ ಆಗಿಲ್ಲವೆಂದು ವರದಿಯಲ್ಲಿದೆ, ಮತ್ತೆ ಕೆಲವರೂ ಹೇಳಿದ್ದಾರೆ. ನಾನಾದರೂ ಅರಿಕೆ ಮಾಡಿಕೊಳ್ಳುವುದಿಷ್ಟೆ: ಯಾವ ಸ್ಥಳಕ್ಕೆ ಹೋದರೂ ಕೂಡ ಅದನ್ನು ಉಪಯೋಗಿಸಿಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದಲೇ ಸ್ವತಃ ನಾನು ಕಟ್ಟಿಸಿದ್ದೇನೆ. ನಾಲ್ಕು ಗೋಪುರಗಳು ನಾಲ್ಕುಕಡೆ ಇವೆ. ಇವು ಅನಾವಶ್ಯಕ ಎಂದು ಕಮಿಟಿಯವರು ಹೇಳಿದ್ದಾರೆ. ಈ ಗೋಪುರಗಳಲ್ಲಿ ಹೋಗಿ ನೋಡಿದರೆ ನಾಲ್ಕು ಕಡೆ ನಾಲ್ಕು ದೊಡ್ಡ ಹಾಲುಗಳಿವೆ. ಮೊದಲು ಪ್ಲಾನಿನಲ್ಲಿ ಇಂಜನಿಯರುಗಳು ಬರೆದಿದ್ದಾಗ ಈ ನಾಲ್ಕು ಗೋಪುರಗಳು ಮತ್ತು ಮುಂದೆ ಇರತಕ್ಕ foyer, ಹಿಂದೆ ಇರತಕ್ಕ foyer ಇವಕ್ಕೆ ನಾಲ್ಕು ಅಂತಸ್ತಿಗೂ ಛಾವಣಿ ಇಲ್ಲದೆ ಮೇಲ್ಛಾವಣಿಯನ್ನು ಕಟ್ಟುವ ಹಾಗೆ ತೂತು ಬಿಟ್ಟಹಾಗೆ ಬಿಟ್ಟಿದ್ದರು. ನಾನು ಅದನ್ನು ನೋಡಿ, 'ನೀವು ಹೇಳಿರುವ ಪ್ರಕಾರ ಮೇಲ್ಛಾವಣಿಮಾತ್ರ ಹಾಕಿ ಅಂತನ್ತುಗಳಿಗೆ ಛಾವಣಿ ಹಾಕದೆ ಬಿಟ್ಟರೆ ನೋಡುವುದಕ್ಕೆ ಅಲಂಕಾರವಾಗಿರುತ್ತದೆಯೇ ಹೊರತು ಸ್ಥಳವನ್ನು ಉಪಯೋಗಿಸುವುದಕ್ಕಾಗುವುದಿಲ್ಲ; ಆದುದರಿಂದ ಅವೆಲ್ಲಕ್ಕೂ ಛಾವಣಿಗಳನ್ನು ಹಾಕಿದರೆ ಅವು ಪ್ರತಿಯೊಂದೂ ಒಂದೊಂದು waiting room ಆಗುತ್ತವೆ' ಎಂದು ಹೇಳಿದೆ. ಬೊಂಬಾಯಿ ಸೆಕ್ರೆಟೇರಿಯೇಟ್ ಕಟ್ಟಡದಲ್ಲಿ—ಬೊಂಬಾಯಿ ವಿಧಾನಸಭೆಯಿಂದ ಬಂದಿರುವ ಮಾನ್ಯ ಸದಸ್ಯರು ನೋಡಿದ್ದಾರೆ—ಪ್ರತಿಯೊಂದು ಅಂತಸ್ತಿನಲ್ಲಿಯೂ ಒಂದೊಂದು waiting room ಇದೆ. ಅದೆ ರೀತಿ ಇಲ್ಲಿಯೂಕೂಡ ಪ್ರತಿಯೊಂದು ಅಂತಸ್ತಿನಲ್ಲಿಯೂ waiting room ಮಾಡುವುದಕ್ಕೆ ಇದನ್ನು ಪರಿವರ್ತಿಸಿ ಎಂದು ಸೂಚನೆ ಕೊಟ್ಟೆ. ತಾವು ಹೋಗಿ ಗೋಪುರಗಳನ್ನೆಲ್ಲ ನೋಡಬಹುದು. ಪ್ರತಿಯೊಂದು ಗೋಪುರದಲ್ಲಿಯೂ ಕೂಡ ಒಂದೊಂದು ರೂಮು ಇದೆ. ಅದರಲ್ಲಿ ಆಫೀನುಗಳನ್ನು ಮಾಡಬಹುದು. ಈಗಾಗಲೇ wireless station ಗೆ ಒಂದನ್ನು ಕೊಟ್ಟಿದ್ದಾರೆ. ಮುಂದುಗಡೆ ಇರತಕ್ಕ ಮೂರು ಗೋಪುರಗಳಲ್ಲಿ ಒಂದು lift room ಆಗಿದೆ, ಇನ್ನೊಂದು ರೂಮು ಉಪಯೋಗಕ್ಕೆ ಅನುಕೂಲವಾಗಿದೆ ಮತ್ತು ಮಧ್ಯೆ ಇರತಕ್ಕ ಗೋಪುರ ಅಲಂಕಾರ ಕ್ಕೋಸ್ಕರವಿದೆ. ಸರಕಾರಿ ಕೆಲಸಕ್ಕೆ ಮತ್ತು ನೋಡುವುದಕ್ಕೆ ಬರತಕ್ಕ ಜನರು ಕುಳಿತುಕೊಳ್ಳುವುದಕ್ಕೋಸ್ಕರ foyer ನಲ್ಲಿ ಅವಕಾಶವಿರುವಂತೆ ಮಾಡಿದೆ. ಅಲ್ಲದೆ ನಾನು ನೋಡಿದ ಅನೇಕ ಪಾರ್ಲಮೆಂಟ್ ಕಟ್ಟಡಗಳಲ್ಲಿ ಏನು ಮಾಡಿದ್ದಾರೆಂದರೆ, ಆ ಕಟ್ಟಡಗಳಲ್ಲಿ ಆಯಾದೇಶದ ಚರಿತ್ರೆಯನ್ನು ಚಿತ್ರರೂಪದಲ್ಲಿ paint ಮಾಡಿ ಇಟ್ಟಿದ್ದಾರೆ. ಅವರ ಸಂಸ್ಕೃತಿ, ಅವರ ಪ್ರಗತಿ ಮುಂತಾದುವುಗಳನ್ನು ಈ ಕಟ್ಟಡಗಳಲ್ಲಿ ಚಿತ್ರಿಸಿದ್ದಾರೆ. ನನಗಾದರೂ ಅದೇ ರೀತಿಯಾ ಒಂದು ಅಭಿಮಾನ ಬಂದು ನಮ್ಮ ದೇಶದಲ್ಲಿ ಇದುವರೆಗೂ ನಡೆದಿರತಕ್ಕ ಚರಿತ್ರಾರ್ಹವಾದ ಘಟನೆಗಳನ್ನು ಕೂಡ ಒಂದು ಚಿತ್ರರೂಪದಲ್ಲಿ ಎಲ್ಲರ ಕಣ್ಣಿಗೂ ಕಾಣಿಸುವಂತೆ ಬರೆಸಬೇಕು ಎನ್ನುವ ಆಶೆಯಿಂದ ಮುಂದುಗಡೆ ಮತ್ತು ಹಿಂದುಗಡೆ foyer ಅನ್ನು ದೊಡ್ಡದಾಗಿ ಮಾಡಿ painting ಗೋಸ್ಕರ ಬಟ್ಟೆ

ದ್ದೇನೆ. ಪಾರ್ಲಮೆಂಟ್ ಕಟ್ಟಡದಲ್ಲಿ—statues ಗೋಸ್ಕರ ಗೂಡನ್ನು ಕಟ್ಟಿಸಿಬಿಟ್ಟಿದ್ದಾರೆ. ಇನ್ನೂ ಅನೇಕ statues ಪಾರ್ಲಮೆಂಟ್ ಭವನದಲ್ಲಿ ಇಟ್ಟಿಲ್ಲ. ಇಲ್ಲಿಯೂಕೂಡ ನಾಲ್ಕೈದು ಕಡೆ ಆ ರೀತಿ ಸ್ಥಳವನ್ನು ಬಿಟ್ಟಿದೆ. ಹಿಂದೆ ನಮ್ಮ ದೇಶಕ್ಕೋಸ್ಕರ ಬಹಳವಾಗಿ ಕೆಲಸ ಮಾಡಿರತಕ್ಕ ಮುಖ್ಯವ್ಯಕ್ತಿಗಳ statues ಆದರೂ ಇಡಬೇಕು. ಮಹಾತ್ಮ ಗಾಂಧಿ, ನೆಹರೂ, ಪಟೇಲ್ ಮುಂತಾದವರ statues ಇಡಬೇಕೆಂಬ ಉದ್ದೇಶದಿಂದ ಅವಕಾಶಮಾಡಿದ್ದೇನೆ. ಈ ರೀತಿಯ ಯಾವ ಒಂದು ಸಂಪ್ರದಾಯ ಪಾಶ್ಚಾತ್ಯ ದೇಶಗಳಲ್ಲಿ ಮತ್ತು ಈ ದೇಶದಲ್ಲಿ ಇದೆಯೋ ಅದೇ ಸಂಪ್ರದಾಯವನ್ನೇ ಇಲ್ಲಿಯೂಕೂಡ ಸ್ಥಾಪಿಸಲು ಪ್ರಯತ್ನಮಾಡಿದರೆ ಅದನ್ನು ಅವಹೇಳನ ಮಾಡತಕ್ಕದ್ದು—ನಾನು ಕಠಿಣ ಭಾಷೆಯನ್ನು ಉಪಯೋಗಿಸಬಾರದು—ಸರಿಯಲ್ಲ ಎಂದು ಮಾತ್ರ ವಿಜ್ಞಾಪಿಸಿಕೊಳ್ಳುತ್ತೇನೆ.

ಇಲ್ಲಿ ಒಂದು ಪ್ರಸ್ತಾಪವಿದೆ. ಆ ಪ್ರಸ್ತಾಪ ಈ ಇಡಿಯ ಮನೋವ್ಯತ್ತಿ ಯಾವ ದಾರಿಯಲ್ಲಿ ಹೋಯಿತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ರಿಟೈರ್ಡ್ ಚೀಫ್ ಇಂಜಿನಿಯರ್ ಎಂ. ನರಸಿಂಹಯ್ಯನವರು ಕಮಿಟಿಯ ಸದಸ್ಯರಾಗಿದ್ದರು. ಇವರು ಹಿಂದೆ ಮೈಸೂರಿನಲ್ಲಿ ಚೀಫ್ ಇಂಜಿನಿಯರ್ ಆಗಿದ್ದರು. ಮೈಸೂರು ಸರ್ಕಾರದ ರಿಟೈರ್ಡ್ ಚೀಫ್ ಇಂಜಿನಿಯರ್‌ಗಳನ್ನೊಳಗೊಂಡ ಒಂದು Technical Advisory Committee ಎಂದು ನೇಮಿಸಿತ್ತು. ಇವರಿಗೆ ಸ್ವಾಭಿಮಾನ ಎಲ್ಲಿಯವರೆಗೆ ಹೋಯಿತು ಎಂದರೆ, ಈ ವಿಧಾನ ಸೌಧದ ಪ್ಲಾನನ್ನು ನನಗೆ ತೋರಿಸಲಿಲ್ಲವಲ್ಲ ಎಂಬ ಸ್ವಾಭಿಮಾನ ಇವರನ್ನು ಕಾಡುವುದಕ್ಕೆ ಪ್ರಾರಂಭ ಮಾಡಿತು. ಅದನ್ನು ನಮ್ಮ ಕಮಿಟಿ ಮುಂದೆ ಇಡಬೇಕಾಗಿತ್ತು ಎಂದು ಬರೆದಿದ್ದಾರೆ. ನಾಲ್ಕು ವರ್ಷಗಳ ಕಾಲ ಮಾತ್ರ ಅಡ್ಮಿನಿಸ್ಟ್ರೇಷನ್‌ನಲ್ಲಿ ಇದ್ದವನಿಗೆ ನನಗೆ ಗೊತ್ತಿಲ್ಲ. ರಿಟೈರ್ಡ್ ಚೀಫ್ ಇಂಜಿನಿಯರುಗಳಿಂದ ಕೂಡಿರತಕ್ಕ ಒಂದು Technical Advisory ಸಮಿತಿಯು ದೊಡ್ಡ ದೊಡ್ಡ ಜಲಾಶಯಗಳು, ಪ್ರಾಜೆಕ್ಟ್‌ಗಳು ಇಂಥವಕ್ಕೆ ಸಂಬಂಧಪಟ್ಟದ್ದು. ಮೈಸೂರಿನಲ್ಲಿ ಕ್ರಾಫರ್ಡ್ ಹಾಲ್ ಕಟ್ಟಿದ್ದಾರೆ. ಇನ್ನೂ ಅನೇಕ ಕಡೆ ದೊಡ್ಡ ದೊಡ್ಡ ಕಟ್ಟಡಗಳನ್ನು ಹೈಸ್ಕೂಲು, ಕಾಲೇಜು ಮತ್ತು ಇತರ ಕಟ್ಟಡಗಳನ್ನು ಕಟ್ಟಿದ್ದಾರೆ. ಇವುಗಳ ನಕ್ಷೆ ಬಗ್ಗೆರೆ ಈ ಸಮಿತಿಯವರ ಪರಿಶೀಲನೆಗೆ ಹೋಗಿದ್ದುದು . . . .

Sri L. SIDDAPPA (Chennagiri).—It is only for irrigation.

Sri K. HANUMANTHAIYA.—I stand corrected, Sir. My friend Sri Siddappa who has been a Minister and a member of this Legislature for a number of years tells me that this Committee is constituted only in relation to irrigation projects. I am thankful to him for the clarification. ಈ ರೀತಿ ತಮ್ಮ ಸಮಿತಿಯ ವ್ಯಾಪ್ತಿಗೆ ಒಳಪಡದಿದ್ದರೂಕೂಡ ನಮ್ಮ ಸಮಿತಿಗೆ ತೋರಿಸಲಿಲ್ಲವಲ್ಲ ಎಂಬ ಒಂದು ಸ್ವಾಭಿಮಾನದಿಂದ ಉಂಟಾದ ಕೋಪವನ್ನು ನನ್ನಮೇಲೆ ತೋರಿಸಿದಹಾಗೆ ಕಾಣುತ್ತದೆ.

4-30 P. M.

ಈ ವಿಧಾನಸೌಧವನ್ನು ನಿರ್ಮಿಸುವುಕ್ಕೆ ಮೊದಲು ನನಗಾದರೂ ಪರಿಣತರು, ಅನುಭವಸ್ಥರ ಸಲಹೆಯನ್ನೂ ಸಹಾಯವನ್ನೂ ಪಡೆಯಬೇಕೆಂಬ ಉದ್ದೇಶವಿತ್ತು. ಆದ್ದರಿಂದಲೇ ಇದಕ್ಕೆ ಸಂಬಂಧಪಟ್ಟ ಕಮಿಟಿಯನ್ನು ನಿಯಮಿಸುವುದಕ್ಕೆ ಪ್ರಸ್ತಾಪ ಮಾಡಿದೆ. ಕಮಿಟಿಯವರು rough plan ಮುಂತಾದುವನ್ನು ಮಾಡಿದರು. Even today this building has all the appearances of the original plan. ಒಳಗಡೆ ಸ್ವಲ್ಪ, ಕಂಬಗಳು ಇತ್ಯಾದಿಗಳ ಬದಲಾವಣೆ ಆಯಿತು. ಆದ್ದರಿಂದ ಪ್ಲಾನ್ ಎಲ್ಲವನ್ನೂ ಬದಲಾಯಿಸಿದ್ದೇವೆ ಎಂದು ಹೇಳುವುದು ಸುಳ್ಳು ಎಂದು ಹೇಳುವುದಕ್ಕೆ ರುಜುವಾತು ಅವರ ವರದಿಯಲ್ಲೇ ಇದೆ. ಹಿಂದೆ ಯಾವ ಪ್ಲಾನು ಇತ್ತು, ಮುಂದೆ ಯಾವ ಪ್ಲಾನ್ ಆಯಿತು ಇತ್ಯಾದಿ ವಿವರಗಳನ್ನು ಆ ವರದಿಯಲ್ಲಿ ಮುದ್ರಿಸಿದ್ದಾರೆ. ಅದನ್ನು ನೋಡಿದವರಿಗೆ ಗೊತ್ತಾಗುತ್ತದೆ. ಸಮಿತಿಯವರ ರಫ್ ಪ್ಲಾನು ಫೈನಲೈಸ್ ಆಯಿತು. ಅದರ ಪ್ರಕಾರ ಕಟ್ಟಡ ಕಟ್ಟಲಾಯಿತು. ಇದರಲ್ಲಿ ನಾಲ್ಕು ಗೋಪುರಗಳು ನಾಲ್ಕು ಮೂಲೆಗಳಲ್ಲಿವೆ, ಅವನ್ನು ಕಟ್ಟಬಾರದಾಗಿತ್ತು ಎಂದು ಒಬ್ಬನದಸ್ಯರು ಹೇಳಿದರು. ಚೀಫ್ ಎಂಜಿನಿಯರ್ ಆಗಿ ಆಗ ಇದ್ದ ಶ್ರೀ ಗಂಗಾಧರ್ ಅವರು ಅದನ್ನು ಮುಂದೆ ಆಲೋಚನೆ ಮಾಡೋಣ ಎಂದು ಹೇಳಿದರು. ಆದರೂ ಕೂಡ ಈ ನಾಲ್ಕು ಗೋಪುರಗಳನ್ನು ಕಟ್ಟಲೇ ಬೇಕು ಎಂದು ಹೇಳಿದ್ದು ಒಂದು ದೊಡ್ಡ ಅಪರಾಧವಾಯಿತು. ಈ ನಾಲ್ಕು ಗೋಪುರಗಳು ಈ ಕಟ್ಟಡದ ಸೌಂದರ್ಯವನ್ನು ಎಷ್ಟು ಮಟ್ಟಿಗೆ ಹೆಚ್ಚಿಸಿವೆ ಎಂಬುದು ಅಭಿಪ್ರಾಯದ ಮಾತು ಎಂದೇ ಹೇಳುತ್ತೇನೆ. ಕೆಲವರಿಗೆ ಅವು ಚೆನ್ನಾಗಿರಬಹುದು, ಕೆಲವರಿಗೆ ಚೆನ್ನಾಗಿಲ್ಲದೇ ಇರಬಹುದು. ಆದರೆ ಈ ನಾಲ್ಕು ಗೋಪುರಗಳು ಉಪಯೋಗಕ್ಕೂ ಕೂಡ ಒಳಪಡುತ್ತವೆ ಎಂಬ ಅಂಶವನ್ನು ಆಗಲೇ ನಾನು ಅರಿಕೆ ಮಾಡಿಕೊಂಡೆ. ಅದನ್ನು ಅವರು ಪ್ರಸ್ತಾಪಿಸಲೇ ಇಲ್ಲ.

ಇನ್ನು ಈ ಸಮಿತಿಯವರು ಈ ಕಟ್ಟಡವನ್ನು ಮೊಟ್ಟ ಮೊದಲು ಪ್ಲಾನ್ ತಯಾರುಮಾಡಿ, ಎಸ್ಟಿಮೇಟ್ ಮಾಡಿ ಪ್ರತಿಯೊಂದು ವಿವರವನ್ನೂ ಕೂಡ ಬರೆದು ಕಟ್ಟಿಸಬೇಕಾಗಿತ್ತು ಎಂದು ಸಾಂಪ್ರದಾಯಕವಾದ ವಾದವನ್ನು ಹೇಳಿದರು. This is what is called red-tapism. ಈ ದಿವಸ ಹೇಳುತ್ತೇನೆ, ಆ ಸಂಪ್ರದಾಯವನ್ನು ಅನುಸರಿಸಿ ಈ ಕಟ್ಟಡ ಕಟ್ಟಲ್ಪಟ್ಟಿದ್ದರೆ ಇನ್ನೂ 8—10 ವರ್ಷಗಳಿಗೂ ಇದು ಮುಗಿಯುತ್ತಾ ಇರಲಿಲ್ಲ. ಇದಕ್ಕೆ ಒಂದು ಸಾಕ್ಷಿ ಹೇಳುತ್ತೇನೆ. ನಾನು ಆಗಸ್ಟ್ 18ನೆಯ ತಾರೀಖಿನ ದಿವಸ ರಾಜೀನಾಮೆ ಕೊಟ್ಟೆ. ಅಲ್ಲಿಂದೀಚೆಗೆ ಎಷ್ಟು ಪ್ರಮಾಣದಲ್ಲಿ ಕೆಲಸನಡೆದಿದೆ, ಅದಕ್ಕಿಂತ ಮೊದಲು ಯಾವ ವೇಗದಲ್ಲಿ ಯಾವ ಪ್ರಮಾಣದಲ್ಲಿ ಕೆಲಸ ನಡೆಯಿತು ಎಂಬುದನ್ನು ಮಾನ್ಯ ಸದಸ್ಯರೆಲ್ಲರೂ ನೋಡಬಹುದು. ಎಷ್ಟೋ ಸಾರಿ ನನಗೆ ಒಂದು ಅಭಿಮಾನ ಬರುತ್ತದೆ. ಈ ಭವನ, ಸರ್ಕಾರದ ಆಡಳಿತ ನಡೆಯುವ ಮಂದಿರವಾಗುವುದರ ಜೊತೆಗೆ ಇತರ ಪಾರ್ಲಿಮೆಂಟರಿ ಕಟ್ಟಡಗಳ ಹಾಗೆ ಒಂದು ಕಲಾ ಭವನವೂ ಆಗಬೇಕು ಎನ್ನುವ ಉದ್ದೇಶದಿಂದ ಸರ್ಕಾರದ ದುಡ್ಡು ಮಾತ್ರವಲ್ಲದೆ ಅನೇಕ ಕಂಪೆನಿಗಳು ಮತ್ತು ಬ್ಯಾಂಕುಗಳವರನ್ನು ಕೂಡ ನಿಮಗೆ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟನ್ನು ಕೊಡಿ ಎಂದು ಪ್ರಾರ್ಥಿಸಿಕೊಂಡೆ. ಸುಮಾರು 75 ಸಾವಿರ ರೂಪಾಯಿಗಳಷ್ಟು ಹಣವನ್ನು ಅನೇಕ ಕಂಪೆನಿಗಳವರು ಮತ್ತು ಬ್ಯಾಂಕುಗಳವರು ಕೊಟ್ಟಿದ್ದಾರೆ. ಶ್ರೀ ಪೂಣಚ್ಚ ಅವರು ಆಗ ಕೂಡಗಿನ ಮುಖ್ಯಮಂತ್ರಿಗ

ಶ್ರೀ ಕೆ. ಹನುಮಂತಯ್ಯ)

ಳಾಗಿದ್ದರು. ಅವರನ್ನೂ ಒಂದು ಕಾವೇರಿ ವಿಗ್ರಹ ಮತ್ತು ಫರ್ನಿಚರ್‌ಅನ್ನು ನಿಮ್ಮ ಸಂಸ್ಥಾನದ ಜ್ಞಾಪಕಾರ್ಥವಾಗಿ ಕಟ್ಟಿಸಿಕೊಡಬೇಕೆಂದು ಕೇಳಿದೆ. ಅವರು ಒಪ್ಪಿಕೊಂಡು ಮಂಜೂರು ಮಾಡಿದರು. ಈ ದಿವಸ ಆ ವಿಗ್ರಹವೂ ಇಲ್ಲ, ಫರ್ನಿಚರ್‌ನೂ ಇಲ್ಲ. ತಾವಾಗಿಯೇ ಕೊಡಲ್ಪಟ್ಟ ದುಡ್ಡಿನಿಂದ ದೊಡ್ಡ ದೊಡ್ಡ ಪೈಯಂಟಿಂಗ್ಸ್ ಬರಿಸಿದ್ದೆ. ಅವನ್ನೆಲ್ಲ ಈ ಕಟ್ಟಡದಲ್ಲಿ ಒಂದು ಕಡೆ ಹೊಟೇಲ್ ಸ್ಕ್ರೀನ್ ಆಗಿ ಇಟ್ಟಿದ್ದಾರೆ. ಅದನ್ನು ನೋಡಿ ನನಗೆ ಕಣ್ಣಿನಲ್ಲಿ ನೀರು ಬಂತು. ಯಾವ ಒಂದು ಮಹತ್ವಾಕಾಂಕ್ಷೆಯಿಂದ ಆ ಚಿತ್ರಗಳನ್ನು ಭರಿಸಲಾಯಿತೋ ಅದನ್ನು ಕಡೆಗಣಿಸಿ ಅವುಗಳನ್ನು ಹೊಟೇಲಿನ ಸ್ಕ್ರೀನ್ ಆಗಿ ಉಪಯೋಗಿಸಿದ್ದಾರೆ. ಇದನ್ನು ಯಾರಾದರೂ ನೋಡಬಹುದು. ಒಂದೊಂದು ಚಿತ್ರಕ್ಕೆ 10—15—20 ಸಾವಿರ ರೂಪಾಯಿ ಆಗುತ್ತದೆಯೆನ್ನು! ಈ ಒಂದು ಆಕ್ಷೇಪಣೆ ಮಾಡಿದ್ದಕ್ಕೆ, ಶ್ರೀ ಪಟ್ಟಾಭಿರಾಮ್ ಅವರು ಏನು ಹೇಳಿದರೋ ಆ ಒಳ ವ್ಯಾಜ್ಯ ಹೆಚ್ಚಾಗುತ್ತ ಇದೆಯಲ್ಲಾ ಅದು ಬೇಡ ಎಂದು ಹೇಳಿ, ಈ 7—8 ತಿಂಗಳಿನಿಂದ ನನ್ನ ದುಃಖವನ್ನು ನನ್ನ ಮನಸ್ಸಿನಲ್ಲಿಟ್ಟುಕೊಂಡಿದ್ದೇನೆ. ಒಂದು ಭಾಷಣವನ್ನೂ ಈ ಸಭೆಯಲ್ಲಿ ಮಾಡುವುದಕ್ಕೆ ಹೋಗಿಲ್ಲ. ಏಕೆಂದರೆ ಒಂದು ಚಿತ್ರದಲ್ಲಿರತಕ್ಕ ಸೌಂದರ್ಯ, ಒಂದು ಕಟ್ಟಡದಲ್ಲಿರತಕ್ಕ ಸೌಂದರ್ಯ ಎಷ್ಟು ಹಿತವೋ ಅದೇ ರೀತಿ ನನ್ನ ಸ್ನೇಹಿತರುಗಳ ಮನಸ್ಸಿನಲ್ಲಿ ನಹೋದ್ಯೋಗಿಗಳ ಮನಸ್ಸಿನಲ್ಲಿ ಉಂಟಾಗ ತಕ್ಕ ಸ್ನೇಹ ಅದೂ ಮಹತ್ತಾದುದು. ಆ ಮಹತ್ತಾದ್ದನ್ನು ಸಾಧಿಸಬೇಕೆಂದು ನಾನು ಹಗಲೂ ರಾತ್ರಿ ದೇವರನ್ನು ಪ್ರಾರ್ಥಿಸುತ್ತಾ ಇದ್ದೇನೆ. ಎಷ್ಟೇ ಸರಿಯಾಗಿರಲಿ ನನ್ನ ಸ್ನೇಹಿತರಿಗೆ ಸ್ವೈರಿನದೇ ಇರತಕ್ಕ ಕೆಲಸವಾದರೆ ಅದರಲ್ಲಿ ಸಾಮರಸ್ಯ ಇರುವುದಿಲ್ಲ. ಎಲ್ಲಿ ಸಾಮರಸ್ಯತೆ ಇರುವುದಿಲ್ಲವೋ ಅಲ್ಲಿ ಸಹಸ್ರಾರು ರೂಪಾಯಿಗಳಿದ್ದರೂ ಸುಖವಿಲ್ಲ ಎನ್ನುವ ಹಾಗೆ ಆಗಿದೆ. ಈ ದಿವಸ ನಾನು ನನ್ನ ಸ್ನೇಹಿತರಲ್ಲಿ ಭಿಕ್ಷೆ ಬೇಡುವುದು ಯಾಚಿಸುವುದು ಏನೆಂದರೆ, ನನ್ನಲ್ಲಿ ಏನಾದರೂ ದೋಷವಿದ್ದರೆ ಯಾವತ್ತೂ ಖಂಡಿಸಿ. ನಾನು ಏನಾದರೂ ಒಳ್ಳೆಯ ಕೆಲಸವನ್ನು ಮಾಡಿದ್ದರೆ ಅದನ್ನು ಒಳ್ಳೆಯ ಕೆಲಸ ಎಂದು ಹೇಳದಿದ್ದರೂ ಚಿಂತೆ ಇಲ್ಲ; ಅದನ್ನು ಮುಂದುವರಿಸಿಕೊಂಡು ಹೋಗಿ ಎಂದು ನನ್ನ ಪ್ರಾರ್ಥನೆ ಈ ಕಟ್ಟಡದ ಮುಂದೆ ಒಂದು ನರ್ಮರ್ ಇದೆ. ಆ ರಸ್ತೆಯಲ್ಲಿ ಹೋದರೆ, ಡಿಸ್ಪ್ಲಾಕ್ಟ್ ಬೋರ್ಡ್ ರಸ್ತೆಯಲ್ಲೂ ಕೂಡ ಅಷ್ಟುಮಟ್ಟಿನ ಕಲ್ಲುಗಳಿರುವುದಿಲ್ಲ. ವಿಪರೀತ ಧೂಳು ಏಳುತ್ತದೆ. ಒಂದು ದಿವಸದಲ್ಲಿ ಸರಿಪಡಿಸ ತಕ್ಕ ಕೆಲಸವನ್ನು ಆ ರೀತಿ ಅಲಕ್ಷ್ಯಮಾಡಿರುವುದನ್ನು ನೋಡಿದರೆ ಬಹಳ ವ್ಯಸನವಾಗುತ್ತದೆ. ಈ ವಿಧಾನ ಸೌಧದ ವಿಷಯದಲ್ಲೂ ಇನ್ನೂ ಅನೇಕ ಸಂಗತಿಗಳನ್ನು ಹೇಳಬಲ್ಲೆ. ಆದರೆ ದೇವರಲ್ಲಿ ಹೀಗೆ ಪ್ರಾರ್ಥಿಸುತ್ತೇನೆ. ಕೂಡಲ ಸಂಗಮದೇವ ನನ್ನನ್ನು ರಕ್ಷಿಸಬೇಕೆಂದು ಹೇಳಿದ್ದೇನೆ; ರಕ್ಷಿಸುತ್ತಾನೆ. ಆ ಕಾಲ ಬಂದಾಗ ನಾನು ಅವರನ್ನು ಪ್ರಾರ್ಥಿಸುತ್ತೇನೆ, ಸ್ನೇಹ ಪುಂಟಾದಮೇಲೆ ಇಂಥ ಕೆಲಸ ಇಂಥ ಕಡೆಮಾಡಿ ಎಂದು. ಆದಿವಸವಾದರೂ ನನ್ನ ಮಾತನ್ನು ಕೇಳ್ಳತಕ್ಕ ಒಂದು ವಾತ್ಸಲ್ಯ ಒಂದು ತರಹ ಕರುಣೆ ಉಂಟಾಗ ತಕ್ಕ ಕಾಲವನ್ನು ಕಾಯುತ್ತೇನೆ.

ಮತ್ತೊಂದು ವಿಷಯವನ್ನು ಈ ಸಮಿತಿಯವರು ಅದ್ಭುತವಾಗಿ ಮಾಡಿದ್ದಾರೆ. ಈ ಕಟ್ಟಡದ ಪ್ಲಾನನ್ನು ಸ್ಪೀಕರ್ ಅವರಿಗೆ ಒಪ್ಪಿಸಿ, ಅವರ ಅಪ್ಪಣೆ ಪಡೆಯಲಿಲ್ಲ ಎಂದು ಹೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ಅವರ terms of referenceಗೆ ಇದು ಒಳಪಟ್ಟಿದ್ದಲ್ಲ. ಯಾರು ಇದಕ್ಕೆ ಸಂಬಂಧಪಟ್ಟವರೋ ಅವರೂ ಕೂಡ ಇಲ್ಲ. ಹಿಂದೆ ಸ್ಪೀಕರ್ ಆಗಿದ್ದ ಶ್ರೀ ಸಿದ್ದಯ್ಯನವರು ಮತ್ತು ಶ್ರೀ ರುದ್ರಪ್ಪನವರು ಅವರಿಬ್ಬರನ್ನೂ ಎಷ್ಟೋ ಸಾರಿ ನನ್ನ ಜೊತೆಯಲ್ಲಿ ಇನ್‌ಸ್ಪೆಕ್ಷನ್ನಿಗೆ ಕರೆದುಕೊಂಡು ಹೋಗಿದ್ದೇನೆ. ಈ ಕಟ್ಟಡದ ಒಂದು ಡಾಕ್ಯುಮೆಂಟರಿ ಫಿಲ್ಮ್ ಮಾಡಿದ್ದಾರೆ. ಶ್ರೀ ಸಿದ್ದಯ್ಯನವರ ಚಿತ್ರ ಈಗಲೂ ಇದೆ. ಅದನ್ನು ನೋಡಿದಾಗಲೆಲ್ಲ ಶಾಸನ ಸಭೆಯ ಅಧ್ಯಕ್ಷರಾಗಿದ್ದ ಶ್ರೀ ಸಿದ್ದಯ್ಯ ಅವರನ್ನು ಆ ಚಿತ್ರದಲ್ಲಾದರೂ ಕಾಣಬಹುದಲ್ಲಾ ಎಂದು ಆ ಒಂದು ನೆನಪು ಬರುತ್ತದೆ. ಮತ್ತು ಶ್ರೀ ಭಾಷ್ಯಂ ಅವರು ಚೇರ್ಮನ್ ಆಗಿದ್ದರು. ಅವರೆಲ್ಲರೂ, ಒಂದು ದಿವಸವಾದರೂ ಕೂಡ, ನನ್ನ ಜೊತೆಯಲ್ಲಿ ಬಂದಾಗ ಕಟ್ಟಡ ನೋಡಿ ಸಂತೋಷಪಟ್ಟು ಕಟ್ಟಿಸಿ ಎಂದು ಪ್ರೋತ್ಸಾಹ ಕೊಟ್ಟರೇ ಹೊರತು ನನ್ನನ್ನು consult ಮಾಡಲಿಲ್ಲ ಎನ್ನುವ ಪ್ರಶ್ನೆ ಅವರ ಮನಸ್ಸಿನಲ್ಲಿ ಹೊಳೆಯಲಿಲ್ಲ. ಎರಡನೆಯದಾಗಿ ಹಿಂದೆ ಇದ್ದ ಸ್ಪೀಕರ್ ಶ್ರೀ ರುದ್ರಪ್ಪ ಅವರನ್ನು ಸಾಕ್ಷಿ ಹೇಳಬೇಕೆಂದು ಕೇಳಿದರು. ಅವರು ಆ ಕಮಿಟಿ ಮುಂದೆ ಹೋದರು. ಹಿಂದಿನ ಸ್ಪೀಕರ್ ಆಗಲಿ ಚೇರ್‌ಮನ್ ಆಗಲಿ ಯಾರೂ ಕೂಡ ಅದು ಒಂದು ಅಪರಾಧ ಎಂದು ಹೇಳದೇ ಇದ್ದ ವಿಷಯವನ್ನು ತಾವಾಗಿ ಹುಟ್ಟಿಸಿಕೊಂಡು, ಸ್ಪೀಕರ್ ಅವರನ್ನು consult ಮಾಡಿದ್ದರೆ ಈ ರೀತಿ ಆಗುತ್ತಾ ಇತ್ತು, ಈ ರೀತಿ ಆಗುತ್ತಾ ಇತ್ತು ಎಂದು ಒಂದು ಊಹೆ, ಕಲ್ಪನೆಯನ್ನು ಮಾಡಿ ಆಕ್ಷೇಪಣೆಯನ್ನು ಮಾಡತಕ್ಕದ್ದು ಸುಸಂಸ್ಕೃತರಿಗೆ ಮರ್ಯಾದೆ ತರತಕ್ಕದ್ದೇ ಎಂದು ನನಗೆ ಮನಸ್ಸಿನಲ್ಲಿ ಎನ್ನಿಸುತ್ತದೆ. ಇದು ಎಲ್ಲಿಯ ಸಂಪ್ರದಾಯ? ಸೆಕ್ರೆಟೇರಿಯಟ್ ಕಟ್ಟಡ, ಲೆಜಿಸ್ಲೇಚರ್ ಎಲ್ಲ ಒಂದಾಗಿ ಕಟ್ಟುವಾಗ ಈ ಕಟ್ಟಡ ಚೆನ್ನಾಗಿ ಆಗಬೇಕು, ಅನುಕೂಲವಾಗಿರಬೇಕು ಎನ್ನುವುದೇ ಮನಸ್ಸಿನಲ್ಲಿ ಮುಖ್ಯ ಪ್ರಶ್ನೆಯಾಗಿರುತ್ತದೆಯೇ ಹೊರತು, ನನ್ನನ್ನು ಕೇಳಲಿಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ಅದಕ್ಕೆ ಒಂದು ದೊಡ್ಡ ಆರೋಪಣೆ ಮಾಡುವುದು ಬಹಳ ಸಂಕುಚಿತವಾದದ್ದು, ಯಾರೂ ಒಪ್ಪದೇ ಇರತಕ್ಕ ಯಾವ ರೂಲ್‌ನಲ್ಲೂ ಇಲ್ಲದೇ ಇರತಕ್ಕ ಒಂದು ಆರೋಪಣೆ, ಸ್ಪೀಕರ್‌ನ್ನು consult ಮಾಡಬೇಕಾಗಿತ್ತು ಎನ್ನುವ ಆರೋಪಣೆಯನ್ನು ಅವರು ಮಾಡಬಾರದಾಗಿತ್ತು. ಅನೇಕ ಸಾರಿ ಸ್ಪೀಕರ್ ಅವರನ್ನು ಕರೆದುಕೊಂಡು ಬಂದು, ಲೆಜಿಸ್ಲೇಚರ್ ಸೆಕ್ರೆಟೇರಿಯವರನ್ನೂ ಕರೆದುಕೊಂಡು ಬಂದು, ನಿಮ್ಮ ಅಸೆಂಬ್ಲಿಹಾಲ್ ಹೇಗಿರಬೇಕು ಸ್ಪೀಕರ್ ಅವರ ಸ್ಥಾನ ಎಲ್ಲಿರಬೇಕು, ಯಾವ ಭಾಗ ಬೇಕು ಎಂದು ಹೇಳಿ ಅನೇಕ ವಿಷಯಗಳನ್ನು ಪ್ರಸ್ತಾಪಮಾಡಿ ಕೇಳಿದ್ದೇನೆ. ಅವರೂ ಕೂಡ ಸಲಹೆಗಳನ್ನು ಕೊಟ್ಟರು. ಇದೊಂದು ನಿದರ್ಶನ.. ಒಂದು ಮಡಕೆಯಲ್ಲಿ ಅನ್ನ ಮಾಡಿತ್ತಿದ್ದರೆ ಅನ್ನವಾಗಿದೆಯೇ ಇಲ್ಲವೆ ಎಂಬುದನ್ನು ನೋಡಬೇಕಾದರೆ ಒಂದು ಅಗುಳನ್ನು ಮಾತ್ರ ನೋಡಿದರೆ ಸಾಕು. ಹೀಗೆ ಅಪ್ರಾಸಂಗಿಕವಾಗಿ ಆರೋಪಮಾಡುವ ಮನೋಭಾವದಿಂದ ಕೂಡಿ ಮಾಡಿರುವ ವರದಿಯನ್ನು ನೋಡಿ ಸೋಜಿಗವಾಗಿದೆ.

ಅಧ್ಯಕ್ಷರು.—ನಿಮಗಿನ್ನೂ ಎಷ್ಟುಕಾಲ ಬೇಕು?

Because I have got to accommodate other Members.

Sri K. HANUMANTHAIYA.—I leave it to your judgment, Sir, because I should not be accused of overspending

the time of the House, as I am already accused of overspending money.

MR. SPEAKER.—The point is, I do not want to stifle the debate. I have got to accommodate other members. If the Hon'ble Member were to finish by 5 o'clock, it will be all right—somewhere by 5 o'clock—he may take five or ten minutes this way or that. It does not matter. But let him finish his speech today.

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಮೊದಲು ಈ ಕಟ್ಟಡದ ಪ್ಲಾನ್ ತಯಾರಾದಾಗ ಮೂರು ಅಂತಸ್ತುಗಳಿಗೆ ಮಾತ್ರ ಅವಕಾಶ ಮಾಡಿತ್ತು. ನಾನು ಈ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡಿಸಿದಾಗ 1952ನೆಯ ಇಸವಿಯ ಕೊನೆಯ ಭಾಗದಲ್ಲಿ ಕರ್ನಾಟಕ ಏಕೀಕರಣವಾಗುವುದು ಅನಿವಾರ್ಯವಾಗಿತ್ತು. ಒಂದನೆಯ ಅಂತಸ್ತನ್ನು ಕಟ್ಟಿಕೊಂಡು ಬರುವ ಹೊತ್ತಿಗೆ ಕರ್ನಾಟಕ ಏಕೀಕರಣವಾಗಬೇಕೆಂದು ಎರಡು ಕೋಟಿ ಜನರ ಆಸೆ ಏನಿತ್ತೋ ಅದು ಕಾರ್ಯರೂಪಕ್ಕೆ ಬರುವ ಸನ್ನಿವೇಶ, ಸೂಚನೆ ಕಂಡು ಬಂತು. ಆಗ ನಾನು ಈಗ ಕಟ್ಟಿ ಬೇಕೆಂದಿರುವ ಕಟ್ಟಡ ಸಾಲುವುದಿಲ್ಲ. ಇನ್ನೊಂದು ಅಂತಸ್ತು ಕಟ್ಟಿ ಎಂದು ಸೂಚನೆ ಕೊಟ್ಟೆ, ಮೂರು ಅಂತಸ್ತುಗಳ ಸ್ಥಳ ಸಾಲುವುದಿಲ್ಲ, ನಾಲ್ಕಾಗ ಬೇಕು ಎಂದು ಮುಂದಾಲೋಚನೆಯಿಂದ ಸೂಚನೆ ನೀಡಿದೆ. ಇಂಜಿನಿಯರುಗಳು ಅದರಂತೆ ವರ್ಕೌಟ್ ಮಾಡಿದರು. ಅನಂತರ ಅದಕ್ಕೆ ಅವಶ್ಯಕವಾದ ಮೊಬಲಗನ್ನು ಬಡ್ಜೆಟ್ಟಿನಲ್ಲಿ ಸೇರಿಸಲಾಯಿತು. ಸೆಕ್ರೆಟೇರಿಯಟ್ ಹಿಂದಿದ್ದ ಅಡ್ಮಿನಿಸ್ಟ್ರೇಟಿವ್ ಕಟ್ಟಡದಲ್ಲಿ ಎಲ್ಲರಿಗೂ ಸಾಕಾಗುವಷ್ಟು ಸ್ಥಳ, ಗ್ಯಾರೇಜುಗಳು, ಮಗ್ಗೆರೆ ಇರಲಿಲ್ಲ. ಅಧ್ಯಕ್ಷರು, ಸಭಾಪತಿಗಳು, ಸಚಿವರುಗಳು ಇವರ ಕಾರುಗಳನ್ನು ಬಿಡುವುದಕ್ಕೆ, ಜಾಗ ವಿರಲಿಲ್ಲ. ಅವನ್ನು ಎಲ್ಲಾದರೂ ಬಿಡಲಿ ಎಂಬ ಮನೋಭಾವವಿರಬಾರದು, ಸರ್ಕಾರಿ ಕಾರುಗಳಿಗೆ ರಕ್ಷಣೆಯಿರಬೇಕು, ಡ್ರೈವರುಗಳು ಬೆಳಗ್ಗೆಯಿಂದ ಸಾಯಂಕಾಲದವರೆಗೂ ಬಿಸಿಲಿನಲ್ಲಿ ಓಡಾಡಬೇಕು, ಇದು ಸರಿಯಲ್ಲ, ಇದಕ್ಕಾಗಿ 50 ಗ್ಯಾರೇಜುಗಳನ್ನು ಕಟ್ಟಿಸಬೇಕು ಎಂದು ಮನಸ್ಸು ಮಾಡಿ ಅದನ್ನು ನಿರ್ಮಿಸಲು ಅವಕಾಶ ಕೊಟ್ಟೆ. ಅನಂತರ ಪೆಟ್ರೋಲುಗಳನ್ನು ಕಟ್ಟುವಾಗ ಮಣ್ಣನ್ನು ಭರ್ತಿ ಮಾಡಿ ಕಟ್ಟುವಂತೆ ಇಂಜಿನಿಯರುಗಳು ತಿಳಿಸಿದರು. ಆದರೆ ನಮ್ಮ ಬಡ ನಾಗರಿಕರಿಗೆ ಗುಮಾಸ್ತರಿಗೆ ತಮ್ಮ ಸೈಕಲ್ಲುಗಳನ್ನು ಬಿಡುವುದಕ್ಕೆ ಸ್ಥಳವಿರಲಿಲ್ಲ. ಅವರಲ್ಲಿ ನೂರಾರು ಮಂದಿ ಬೈಸಿಕಲ್ಲುಗಳ ಮೇಲೆ ಬರುತ್ತಾರೆ. ಹಿಂದೆ ಅಡ್ಮಿನಿಸ್ಟ್ರೇಟಿವ್ ಕಟ್ಟಡದಲ್ಲಿ ವರಾಂಡಾದಲ್ಲಿ ಬೈಸಿಕಲ್ಲುಗಳನ್ನು ಬಿಡುತ್ತಿದ್ದುದರಿಂದ ಹೋಗಿ ಬರುವವರಿಗೆ ತೊಂದರೆಯಾಗುತ್ತಿತ್ತು. ಆದ್ದರಿಂದ ಸುಮಾರು 500 ಬೈಸಿಕಲ್ಲುಗಳನ್ನು ನಿಲ್ಲಿಸುವುದಕ್ಕೆ ಸರಿಯಾದ ಅವಕಾಶ ಮಾಡಬೇಕೆಂದು ಯೋಚಿಸಿ ಮೆಟ್ಟಿಲನ್ನು ಕಟ್ಟಲು ಮಣ್ಣು ತುಂಬುವುದು ಬೇಡ, ಸಿಮೆಂಟ್ ಕಾಂಕ್ರೀಟ್ ಹಾಕಿ ಕಟ್ಟಿ ಬೈಸಿಕಲ್ಲುಗಳನ್ನು ಬಿಡಲು ಅದರ ಕೆಳಗೆ ಅವಕಾಶ ಮಾಡಿ ಎಂದು ತಿಳಿಸಿದೆ. ಹಾಗೆಯೇ ರಸ್ತೆಗಳಾಗ ಬೇಕಾದದ್ದು ಅವಶ್ಯಕ. ರಸ್ತೆಗಳೇ ಇಲ್ಲದಿದ್ದರೆ ಕಟ್ಟಡದ ಬಳಿಗೆ ಹೋಗುವುದು ಹೇಗೆ? ಈ ನಾಲ್ಕು ಬಾಬುಗಳಿಂದ ಮೊದಲೇನು ಅಂದಾಜಾಗಿತ್ತೋ ಅದು ಹೆಚ್ಚಾಯಿತು. ಹೀಗೆ ಇದಕ್ಕೆಲ್ಲ ಖರ್ಚಾಗಿರುವಾಗ ಈ ದಿವನ ಗ್ಯಾರೇಜ್ ಇರಬಾರದಾಗಿತ್ತು, ರಸ್ತೆ ಬೇಡ, ಸೈಕಲ್ ಸ್ಟ್ಯಾಂಡ್ ಬೇಡ ಎಂದು ಯಾರು ತಾನೆ ಹೇಳಲು ಸಾಧ್ಯ? ಈ ಸೌಕರ್ಯವೇನು ಬೇಕಾಗಿತ್ತೋ ಅದನ್ನು ಮಾಡಿರುವುದನ್ನು ನೋಡಿಯೂ ಕೂಡ ಟೀಕೆಮಾಡುತ್ತಿದ್ದಾರೆ. ಈ ಟೀಕೆ ಎಷ್ಟು ಸಾಧುವಾದುದೆಂಬುದನ್ನು ನೋಡಬೇಕು.

ಇನ್ನೊಂದು ಮಾತು ಹೇಳುತ್ತೇನೆ. ಮಣ್ಣನ್ನು ತೆಗೆಯಲು ಎಷ್ಟೋ ಖರ್ಚಾಯಿತು. ಮೂರು ಮಂದಿ ಮಾನ್ಯ ಸದಸ್ಯರು ಮಣ್ಣು ಏನಾಯಿತೆಂದೂ, ಅದರಿಂದೆಷ್ಟು ಆದಾಯ ಬಂದಿದೆಯೆಂದೂ ಪ್ರಶ್ನೆ ಮಾಡಿ, ಅದನ್ನು ವಿಚಾರ ಮಾಡದೆ, ದುಂದು ವೆಚ್ಚವೆಂದು ಅಪ್ಪಣೆ ಕೊಡಿಸಿದರು. ಬುಲ್‌ಡೋಜರುಗಳು ಮತ್ತು ಸ್ಕ್ರ್ಯಾಪರ್ಸ್ ಇವುಗಳಿಂದ ತೆಗೆದ ಮಣ್ಣು ಎಷ್ಟು ಸದುಪಯೋಗವಾಗಿದೆಯೆಂಬುದು ಬೆಂಗಳೂರಿನ ನಾಗರಿಕರಿಗೆ ಗೊತ್ತು. ಇಂಟರ್ ಕಾಲೇಜ್ ಮತ್ತು ಸೆಂಟ್ರಲ್ ಕಾಲೇಜ್ ಮುಂದೆ ದೊಡ್ಡ ಗುಂಡಿಯಿತ್ತು, ನುಮಾರು 20-30 ಅಡಿ ಆಳವಾಗಿಯೂ ಮತ್ತು ಒಂದು ಕ್ರಿಕೆಟ್ ಫೀಲ್ಡಿನಷ್ಟು ದೊಡ್ಡದಾಗಿಯೂ ಗುಂಡಿಯಿತ್ತು. ಅಲ್ಲೆಲ್ಲ ಕಟ್ಟಡ ಹಾಕುತ್ತಿದ್ದರು. ಈ ದಿವನ ಅದು ಮಣ್ಣು ಭರ್ತಿ ಮಾಡಿದ ಮೇಲೆ ಆಟದ ಮೈದಾನವಾಗಿದೆ. ಕನ್ಸೂರಿಬಾಯಿ ರಸ್ತೆ ಮತ್ತು ಸಿಟಿ ಮತ್ತು ಕಂಟೋನ್ಮೆಂಟ್ ಲಿಂಕ್ ರಸ್ತೆ ಬಹಳ ಇಕ್ಕಟ್ಟಾಗಿತ್ತು. ಈ ದಿವನ ಅದೆಷ್ಟು ವಿಶಾಲವಾಗಿದೆ ಎಂದು ನೋಡಿದವರು ಸಂತೋಷಪಡುತ್ತಿದ್ದಾರೆ. ಗಾಂಧಿನಗರದಲ್ಲಿ ಒಂದು ದೊಡ್ಡ ಕಲ್ಯಾಣಿಯಿದ್ದು, ಅದರಲ್ಲಿ ನೀರು ನಿಂತು ಅನಾರೋಗ್ಯಕ್ಕೆ ಕಾರಣವಾಗಿತ್ತು. ಅದಕ್ಕೆ ಮಣ್ಣು ಭರ್ತಿ ಮಾಡಿದ ಮೇಲೆ ಎಷ್ಟೋ ಅನುಕೂಲವಾಯಿತು. ಈ ಮಣ್ಣನ್ನು ಒಂದು ಟನ್ನಿಗೆ ಇಷ್ಟು ಎಂದು ಮಾರಿದ್ದರಿಂದ ಸುಮಾರು ಒಂದು ಲಕ್ಷ ರೂಪಾಯಿಗಳ ಆದಾಯ ಬಂತು. ಅನೇಕ ಖಾಸಗಿ ಜನರೂ ತೆಗೆದುಕೊಂಡಿದ್ದಾರೆ ಮತ್ತು ಸರ್ಕಾರದ ಇತರ ಇಲಾಖೆಗಳವರೂ ತೆಗೆದುಕೊಂಡಿದ್ದಾರೆ. ಇಷ್ಟು ಮಣ್ಣನ್ನು ಸಾಗಿಸಿದ್ದರಿಂದ ಪಟ್ಟಣದ ಸೌಲಭ್ಯವನ್ನೂ, ಸೌಂದರ್ಯವನ್ನೂ ಹೆಚ್ಚಿಸಿದ್ದರ ಜೊತೆಗೆ ಹಣವೂ ಬಂತು. ಈ ವಿಚಾರಗಳನ್ನು ಪರಿಶೀಲಿಸುವುದಕ್ಕೆ ಮನಸ್ಸು ಮಾಡದೆ ಆರೋಪಣೆ ಮಾಡಿದ್ದಾರೆ.

ಈ ಕೆಲಸ ಮಾಡಿದ ಇಂಜಿನಿಯರುಗಳ ವಿಚಾರದಲ್ಲಿ ಒಂದಂಶವನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಈ ಕಟ್ಟಡವನ್ನು ಕಟ್ಟಿದಾಗ ಇದಕ್ಕೆ ಸಂಬಂಧ ಪಟ್ಟ ಪ್ರತಿಯೊಬ್ಬರೂ ಕೂಡ ತಮ್ಮ ಸ್ವಂತ ಕಟ್ಟಡ ಕಟ್ಟಬೇಕಾದರೆ ಎಷ್ಟು ಹ್ರೇವು, ಎಷ್ಟು ಎಚ್ಚರಿಕೆ ತೋರಿಸುತ್ತಿದ್ದರೋ ಅದಕ್ಕಿಂತ ಹೆಚ್ಚಿನ ಹ್ರೇವು, ಎಚ್ಚರಿಕೆ ತೋರಿಸಿದರು. ಭಾನುವಾರದ ದಿವಸವೂ ಸಹ ಇಂಜಿನಿಯರುಗಳೆಲ್ಲಾ ಕೆಲಸ ಮಾಡಿದ್ದಾರೆ. ಪ್ರತಿದಿನವೂ 5 ಘಂಟೆಗೆ ನಾನು ಕಟ್ಟಡದ ಬಳಿಗೆ ಹೋದರೆ ಎಷ್ಟೋ ವೇಳೆ ಏಳು ಘಂಟೆಯವರೆಗೆ ಇರುತ್ತಿದ್ದೆ. ಆದ್ದರಿಂದ ಇಂಜಿನಿಯರುಗಳೂ ಸಹ ಅಲ್ಲೇ ಇರುತ್ತಿದ್ದರು. ಹೀಗೆ ಮೈನೂರು ದೇಶದ ಚರಿತ್ರೆಯೊಳಗೆ ಸಂಬಂಧಪಟ್ಟ ಅಧಿಕಾರವರ್ಗದವರು ಇಷ್ಟು ಪ್ರಮಾಣದಲ್ಲಿ ಚೆನ್ನಾಗಿ ಹೆಚ್ಚು ಕೆಲಸ ಮಾಡಿರುವುದನ್ನು ಯಾರಾದರೂ ಕಂಡುಹಿಡಿದರೆ ಅವರಿಗೆ ತಲೆಬಾಗುತ್ತೇನೆ. ಹೀಗೆ ಹೆಚ್ಚು ಕಾಲ ಶ್ರದ್ಧಾಭಕ್ತಿಗಳಿಂದ ಕೆಲಸ ಮಾಡಿದ್ದಾರೆ. ಕಟ್ಟಡದ ಮುಂದೆ "Government work is God's work" "ಸರ್ಕಾರದ ಕೆಲಸ ದೇವರ ಕೆಲಸ." ಎಂದೇನು ನಾನು ಬರೆಸಿದ್ದೇನೆಯೋ ಅದೇ ರೀತಿ ಭಕ್ತಿಯಿಂದ, ಶ್ರದ್ಧೆಯಿಂದ

(ಶ್ರೀ ಕೆ. ಹನುಮಂತಯ್ಯ)

ಎಲ್ಲರೂ ಕೆಲಸ ಮಾಡಿದ್ದಾರೆಂದು ಧಾರಾಳವಾಗಿ ಹೇಳುತ್ತೀನೆ. ಹೀಗೆ ಕೆಲಸ ಮಾಡಿದವರು "ಸ್ವಾಮಿ, ಭದ್ರಾನದಿ, ನುಗುನದಿ, ಮಹಾತ್ಮಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟುಗಳಲ್ಲಿ ಕೆಲಸಮಾಡಿದವರಿಗೆ ಓವರ್ ಟೈಂ ಅರೋಯನ್ಸ್ ಕೊಡುವ ಪದ್ಧತಿಯಿದೆ; ನಮಗೂ ಅದರಂತೆ ಕೊಡಬೇಕು." ಎಂದು ಕೇಳಿದರು. ನಾನು "ಕಟ್ಟಡ ಇಷ್ಟು ಕಾಲದಲ್ಲಿ ಕಟ್ಟಿದರೆ ಓವರ್‌ಟೈಂ ಅರೋಯನ್ಸ್ ಕೊಡುತ್ತೀನೆ, ಇಲ್ಲದಿದ್ದರೆ ಇಲ್ಲ" ಎಂದು ಕಂಡೀಷನ್ ಹಾಕಿ ಹೇಳಿದೆ. ಇದಕ್ಕೆ ಸಂಬಂಧಪಟ್ಟ ಫೈಲು ಹಾಗೆಯೇ ಇದೆ. ಈ ದಿವಸ ನೋಡಿದರೆ ಆಶ್ಚರ್ಯವಾಗುತ್ತಿದೆ. ಸಮಿತಿಯ ಸದಸ್ಯರು ಎರಡು ತಿಂಗಳಿಗೆ ತಲೆಗೆ 5 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಸಂಭಾವನೆ ಪಡೆದಿದ್ದಾರೆ. ಮೂರು ಮಂದಿ ಸಮಿತಿ ಸದಸ್ಯರೂ ಹಣ ತೆಗೆದುಕೊಂಡು ಹೋದರು. ಜೊತೆಗೆ ಅವರ ಸಿಬ್ಬಂದಿಗೆ ಎಂ. ಎಸ್. ಆರ್. ನಲ್ಲಿರುವುದಕ್ಕಿಂತ ಹೆಚ್ಚು ಸಂಭಾವನೆ ಕೊಟ್ಟಿದ್ದಾರೆ. ಇದು ಸರಿಯೆ ಎಂಬುದನ್ನು ಯೋಚನೆ ಮಾಡಬೇಕು. ಹೀಗೆ ಕಟ್ಟಡದಲ್ಲಿ ಕುಳಿತು ಇಷ್ಟ ಬಂದಾಗ ಕೆಲಸ ಮಾಡುತ್ತಿದ್ದ ನೌಕರರಿಗೆ ಮತ್ತು ಸದಸ್ಯರಿಗೆ ಓವರ್‌ಟೈಂ ಅರೋಯನ್ಸ್ ಕೊಡುವುದು, ಯಾವ ಇಂಜಿನಿಯರುಗಳು ಭಾನುವಾರ ಸಹ ಕೆಲಸ ಮಾಡಿ ರಾತ್ರಿ 8-10 ಘಂಟೆಯವರೆಗೆ ಕೆಲಸ ಮಾಡುತ್ತಿದ್ದರೋ ಅವರಿಗೆ ಒಂದು ಕಾಸೂ ಇಲ್ಲ! ಅಷ್ಟೇ ಅಲ್ಲದೆ ಅವರ ಮೇಲೆ ಎಲ್ಲ ಕಡೆಗಳಿಂದಲೂ ಆಕ್ಷೇಪಣೆ, ಆರೋಪಣೆ. ದೇವರಿದ್ದಾನೆಂದು ಹೇಳಿದರೆ ಈ ಅನ್ಯಾಯವಾದ ಆರೋಪವನ್ನು ಅವನು ಸಹಿಸಲಾರನೆಂದು ತಿಳಿದುಕೊಂಡಿದ್ದೇನೆ. ಅನೇಕ ಸಮಿತಿಗಳ ಸದಸ್ಯರಾಗಿದ್ದ ಶ್ರೀಯುತರುಗಳಾದ ಪಟ್ಟಾಭಿರಾಮ್, ಇಮಾಂ, ಹುಚ್ಚೇಗೌಡ, ಹುಚ್ಚ ಮಾಸ್ತಿಗೌಡ ಮುಂತಾದವರು ಯಾರಿಗೂ ಐದು ಸಾವಿರ ರೂಪಾಯಿಗಳಷ್ಟು ಲಂಪ್‌ಸಂ ಹಣ ಕೊಟ್ಟಿಲ್ಲ.

I ask in all fairness, where was the necessity to pay Rs. 5,000 to these two members for part-time work spread over one or two months. That too they have not tackled the problem that had been entrusted to them, namely, perusal of the accounts and finding out which item is correct and which item is not.

ಮತ್ತೊಂದು ದುಃಖದ ಸಂಗತಿಯನ್ನು ಹೇಳಬೇಕಾಗಿದೆ. ವಿಧಾನಸೌಧ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಸಲಹೆ ಬಂತು. ಏನೂ ಅನ್ಯಾಯ ಮಾಡಿಲ್ಲ ಎಂದು ನನಗೆ ಗೊತ್ತಿತ್ತು. ಈ ಕಟ್ಟಡದ ಕೆಲಸವು ನಿಷ್ಕಳಂಕವಾಗಿ ನಡೆದಿದೆ ಎಂದು ನನ್ನ ಮನಸ್ಸಿಗೆ ಗೊತ್ತಿತ್ತು. ಯಾವ ರೀತಿಯ ಅನ್ಯಾಯವೂ ಆಗಿಲ್ಲ, ಯಾರೂ ಅಪರಾಧ ಮಾಡಿಲ್ಲ ಎಂಬುದನ್ನು ತೋರಿಸಲಿ ಮತ್ತು ಈ ಮಹಾಕಾರ್ಯವನ್ನು ಸಮಿತಿಯು ಪರಿಶೀಲನೆ ಮಾಡಿದ ಮೇಲೆ ನಿಷ್ಪಕ್ಷಪಾತವಾಗಿ "ಪ್ರಶಂಸಿಸಬೇಕಾಗುವುದೆಂದು ಸಮಿತಿಯನ್ನು ನೇಮಿಸಿದಾಗ ಧೈರ್ಯದಿಂದ ಹಾಗೆ ನನಗೆ ಎನಿಸಿತ್ತು. ನತ್ಸಂಪ್ರದಾಯಗಳನ್ನು ಬೆಳೆಸಿಕೊಂಡು ಬರಬೇಕೆಂದು ನಾನು ಮನಸ್ಸಿನಲ್ಲಿ ನಿರ್ಧರಿಸಿಕೊಂಡಿದ್ದೆನು. ಪ್ರೈವೇಟಾಗಿ ಹೋಗಿ ವರದಿಯನ್ನು ಹಾಗೆ ಬರೆಯಿರಿ, ಹೀಗೆ ಬರೆಯಿರಿ ಎಂದು ಸಮಿತಿಯ ಸದಸ್ಯರಿಗೆ ಹೇಳುವುದು ಅನ್ಯಾಯ, ಅದು ಅನಿತ್ಯ; ಅಪ್ರತ್ಯಕ್ಷವಾಗಿ ಹೇಳುವದೂ ಅನ್ಯಾಯ. ಸಮಿತಿಯ ಅಧ್ಯಕ್ಷರನ್ನು ಒಂದು ಬಾರಿ ಮಾತ್ರ ಬಂದು ನೋಡಿದೆನೇ ಹೊರತು ಅನಂತರ ಪುನಃ ಅವರನ್ನು ನೋಡುವ ಗೋಜಿಗೆ ನಾನು ಹೋಗಲಿಲ್ಲ. ರಾಜಕೀಯ ಪಾತಾವರಣವು ವಿಷಮಯವೂ ಮೋಸಮಯವೂ ಆಗಿತ್ತು. ನಾನು ರಾಜೀನಾಮೆ ಕೊಟ್ಟಮೇಲೆ ಅವರ ವರ್ತನೆಯಲ್ಲಾ ಬದಲಾವಣೆ ಆದದ್ದು ಕಂಡು ಬಂತು. ಈ ಊರಲ್ಲಿ ದೊಡ್ಡ ಮನಷ್ಯರು ಎಂದು ತಿಳಿದುಕೊಂಡವರೊಬ್ಬರು ನಂಗಡ ಸಮಿತಿಯ ಅಧ್ಯಕ್ಷರು ಸ್ನೇಹಮಾಡಿದರು. ನಾಲ್ಕುವರ್ಷ ಈ ಮಹನೀಯರು ನಾನು ಅಧಿಕಾರದಲ್ಲಿದ್ದಾಗ ಹಿಂಸೆ ಕೊಟ್ಟವರು. ಇವರು ಅಧ್ಯಕ್ಷರನ್ನು ಖಾಸಗೀ ರೀತಿಯಿಂದ ಭೇಟಿಯಾಗುತ್ತಿದ್ದರು. ಇವರ ಸ್ನೇಹವು ಅಧ್ಯಕ್ಷರ ಮನಸ್ಸನ್ನು ಕೆಡಿಸಲು ಕಾರಣವಾಯಿತು.

Sri H. K. VEERANNA GOWDH (Minister for Public Works).—May I know whether the clock is moving?

Mr. SPEAKER.—It is not moving. I have got another watch here.

Sri K. HANUMANTHAIYA.—Sir, I will take only 20 minutes more.

Mr. SPEAKER.—I would request the Hon'ble Member that, after all, I am personally very much embarrassed on account of the time-limit. I will give him some more time, if he can finish today.

Sri S. S. KOLKEBAIL (Bramhawar).—Let him have his say, because he is the main accused here, Sir.

Mr. SPEAKER.—There is no accused present here. The Hon'ble Member will remember that we are not discussing the Vidhana Soudha Enquiry Committee Report. We are only discussing the Demand Vote on Account, and since there is this item included therein the Hon'ble Member has been allowed to explain his position.

Sri S. S. KOLKEBAIL.—My point is about the discussion of the Budget on Account and to that extent so much money has been spent. Let him explain.

Mr. SPEAKER.—Let the Hon'ble Member please hear me. There is nobody here as an accused person.

Sri S. S. KOLKEBAIL.—That is an ironical term.

Mr. SPEAKER.—Ironical terms should not be used.

Sri K. HANUMANTHAIYA.—I am in the hands of this House and whatever time Chair is pleased to give me, I will confine my remarks to that time-limit, Sir.

Mr. SPEAKER.—I am prepared to sit a little bit longer and if it is not

inconvenient to members. We will sit half-an-hour more.

5 P.M.

ಶ್ರೀ ಕೆ. ಹನುಮಂತಯ್ಯ.—ಅನಂತರ ಒಂದು ದಿವಸ ನಾನು ಸಮಿತಿಯ ಅಧ್ಯಕ್ಷರನ್ನು ಕಾಣಲು ಅವರ ಚೇಂಬರಿನೊಳಗೆ ಹೋದೆನು. ಅಧ್ಯಕ್ಷರು ವಿನಯದಿಂದ ಮುಖ ಮೇಲೆ ಸಹ ಮಾಡಿ ನನ್ನಕಡೆಗೆ ನೋಡಲಿಲ್ಲ. ಅವರ ಮುಖಭಾವ ಭಯಂಕರವಾಗಿದ್ದುದು ನನಗೆ ಕಾಣುತ್ತಿತ್ತು. He did not receive me. ಅಧ್ಯಕ್ಷರ ಮನಸ್ಸನ್ನು ರಾಜಕೀಯ ಉದ್ದೇಶದಿಂದ ಕೆಡಿಸಿದ್ದಾರೆಂದು ನನ್ನ ಮನಸ್ಸಿಗೆ ಗೊತ್ತಾಯಿತು. ಅನಂತರ ನನ್ನ ಸ್ನೇಹಿತರು "This is a vulgar type of building" ಎಂದು ಏನೇನೋ ಹೇಳಿದ್ದಾರೆ. ಮತ್ತು ಇನ್ನು ಕೆಲವರು ಇಷ್ಟು ದೊಡ್ಡ ಕಟ್ಟಡವನ್ನು ಏಕೆ ಕಟ್ಟಬೇಕಾಗಿತ್ತು ಎಂದು ಮುಂತಾಗಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ಅದಕ್ಕೆಲ್ಲಾ ಸಾಕ್ಷಿ ಬೇಕಾದರೂ ಕೊಡುವುದಕ್ಕೆ ನನಗೆ ಧೈರ್ಯವಿದೆ. ಏನಾದರೂ ಆಗಲಿ ಈ ಸಮಿತಿಯವರು ಈ ಒಂದು ಚಿಕ್ಕ ವಿಷಯವನ್ನ ದೊಡ್ಡದು ಮಾಡಿ ಬಹಳ ಅನ್ಯಾಯವಾಗಿದೆ, ಅಕ್ರಮವಾಗಿದೆ ಎಂದು ತೋರಿಸಿದ್ದಾರೆ. ನಾನು ಈ ಸಮಿತಿಯ ಮುಂದೆ ಸಾಕ್ಷಿ ಕೊಡುವುದಕ್ಕೆ ಹೋಗಿದ್ದಾಗ ನಾನೇ ಅವರನ್ನು ತಮಗೇನು ಬೇಕೋ ಅದನ್ನೆಲ್ಲ ಕೇಳಿ ಎಂದು ಹೇಳಿದ್ದೇನೆ. ಸಾಕ್ಷಿಕೊಡುವುದಕ್ಕೆ ಹೋಗಿ ಸಾಕ್ಷಿ ಕೊಟ್ಟಿದ್ದನ್ನು "I do not take it down" ಎಂದು ಹೇಳಿದರು. ಇದು ಏನಾಗಿದೆ ಎಂದರೆ "ತೋಳ ಹಳ್ಳಕ್ಕೆ ಬಿದ್ದಾಗ ಆಳಿಗೊಂದು ಕಲ್ಲು" ಎನ್ನುವ ಗಾದೆಯಂತೆ, ಯಾವುದೋ ಒಂದು ದುರುದ್ದೇಶವನ್ನಿಟ್ಟುಕೊಂಡು ಈ ರೀತಿ ಮಾಡುವುದು ಸರಿಯಲ್ಲ. ನನ್ನನ್ನು ಪ್ರಶ್ನೆ ಕೇಳಿದ ರೀತಿಯನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿ ತೋರಿತು.

ಮತ್ತೊಂದು ದೊಡ್ಡ ವಿಷಯ, ಸ್ಪೆಷಲ್ ಇಂಜಿನಿಯರ್‌ಅವರ ನೇಮಕಕ್ಕೆ ಸಂಬಂಧಿಸಿದ್ದು. ಅವರಿಗೇನು ಕ್ವಾಲಿಫಿಕೇಷನ್ಸ್ ಇತ್ತು ಎಂದು ಕೇಳಿದರು. ರಿಕಾರ್ಡಿನಲ್ಲಿ ಏನಿದೆಯೋ ಅದರಂತೆ ಹೇಳಿದ್ದಾಯಿತು. ಆಮೇಲೆ ನಾನು ಅದರ ಮೇಲೆ ಏನನ್ನು ಹೇಳಿದರೂ ಅದನ್ನು ಬರೆದುಕೊಳ್ಳಲಿಲ್ಲ. ಇನ್ನು ಈ ಇಂಜಿನಿಯರ ವಿಷಯ. ಇವರು ಶ್ರೀ ಮುನಿಯಪ್ಪ ಎಂಬುವರು. ಇವರನ್ನು 1952ನೆಯ ಮಾರ್ಚಿಯಲ್ಲಿ ರಿಟೈರು ಮಾಡಬೇಕಾಗಿತ್ತು. ಆದರೆ ನನ್ನ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ. ಸಿ. ರೆಡ್ಡಿಯವರು ಈ ಸ್ಪೆಷಲ್ ಇಂಜಿನಿಯರಾದ ಶ್ರೀ ಮುನಿಯಪ್ಪನವರು ಪೂನಾದಲ್ಲಿದ್ದಾಗ ಬಹಳ ಪ್ರಮುಖವಾದ ಮತ್ತು ಉತ್ತಮವಾದ ದೊಡ್ಡ ದೊಡ್ಡ ಕಟ್ಟಡದ ಕೆಲಸಗಳನ್ನು ಮಾಡಿದ್ದಾರೆಂದು ಹೇಳಿ ಬಹಳ ಶ್ಲಾಘನೆ ಮಾಡಿದ್ದರು. ನಾನು ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಅವರನ್ನು ಐದು ವರ್ಷಗಳವರೆಗೆ ನೇಮಿಸಿದೆ. ಮತ್ತು ಅವರ ವಿಷಯವಾಗಿ ಬಂದಿದ್ದ ಸರ್ಟಿಫಿಕೇಟುಗಳೂ ಕೂಡ ಇವೆ. ಅವುಗಳನ್ನೆಲ್ಲವನ್ನೂ ನೋಡಿ ಈ ಸ್ಪೆಷಲ್ ಇಂಜಿನಿಯರನ್ನು ನೇಮಕ ಮಾಡಿದ್ದು. ಇದರಲ್ಲೇನೂ ರೂಪಾಯಿ ನನಗೆ ಕಂಡುಬರಲಿಲ್ಲ. ಅದನ್ನೇಕೆ ಇಲ್ಲಿ ಇಷ್ಟು ದೊಡ್ಡದಾಗಿ ಹೇಳಬೇಕಾಗಿತ್ತೋ ನನಗೆ ಗೊತ್ತಾಗಲಿಲ್ಲ. ಅವರೂ ಕೂಡ ಒಳ್ಳೆಯ ಸಹೃದಯದ ಮನೋಭಾವದಿಂದ ಕೆಲಸವನ್ನು ಚೆನ್ನಾಗಿ ಮಾಡಿದರು. ಆದರೆ ಲೆಕ್ಕಾಚಾರವನ್ನು ಕ್ರಮವಾಗಿ ಎಂದರೆ ಅಪ್‌ಟುಡೇಟಾಗಿ ಇಡಬೇಕು ಎನ್ನುವುದನ್ನು ಅವರೂ ಮರೆತುಬಿಟ್ಟರು ನನಗೂ ಹೇಳಲಿಲ್ಲ. ಸರ್ಕಾರದವರೂ ಗಮನಿಸಲಿಲ್ಲ. "Accounts are in an unsatisfactory condition,; I want more staff" ಎಂದು ಕೂಡ ಕೇಳಲಿಲ್ಲ. ಅವರೂ ಒಂದು ತಪ್ಪು ಮಾಡಿದರು. ಇದನ್ನೇ ಒಂದು. ದೊಡ್ಡ ವಿಷಯವನ್ನಾಗಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಇಷ್ಟು ಹೇಳುತ್ತೇನೆ; ಸ್ಪೆಷಲ್ ಇಂಜಿನಿಯರಾಗಲಿ, ಅಲ್ಲಿದ್ದ ಅಸಿಸ್ಟೆಂಟ್ ಇಂಜಿನಿಯರಾಗಲಿ ಎಲ್ಲರೂ ಧೈರ್ಯದಿಂದ ಚೆನ್ನಾಗಿ ಕೆಲಸ ಮಾಡಿದ್ದಾರೆ. ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಅವರು ತಪ್ಪುಗಳನ್ನೆನೂ ಮಾಡಿಲ್ಲ ಎಂದು ಹೇಳುವುದಿಲ್ಲ. ಅವರೂ ಮಾಡಿದ್ದಾರೆ. ಆದರೆ ಅವರೇನೂ ಅಂತಹ ದೊಡ್ಡ ತಪ್ಪುಗಳನ್ನೆನೂ ಮಾಡಿಲ್ಲ. ತಪ್ಪುಗಳು ಆಗುತ್ತವೆ, ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಅವೆಲ್ಲಾ ಸಾಮಾನ್ಯವಾದ ವುಗಳು. ಈಗ ನಮ್ಮ ದೇಶದಲ್ಲೆಲ್ಲಿರುವ ಭದ್ರ, ನುಗು, ಲಕ್ಕವಳ್ಳಿ ಮುಂತಾದ ಯಾವುದೇ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಪರಿಶೀಲಿಸಲಿ, ಅಲ್ಲಿಯೂ ಕೂಡ ಇದೇ ತರಹದ ಆರೋಪಣೆಗಳು, ತಪ್ಪುಗಳು ಕಂಡುಬರದೇ ಇದ್ದರೆ ಅದಕ್ಕಾಗಿ ತಾವು ನಭಿಕರು ಯಾವ ರೀತಿಯ ಶಿಕ್ಷೆಕೊಟ್ಟರೂ ತಲೆಬಾಗಿ ವಹಿಸಿಕೊಳ್ಳಲು ಸಿದ್ಧನಾಗಿದ್ದೇನೆಂದು ಹೇಳುತ್ತೇನೆ. ಇನ್ನೇನೂ ಹೆಚ್ಚಾಗಿ ಹೇಳಲಾರೆ.

ಈ ಕಟ್ಟಡ ಆಗದಿದ್ದರೆ ಏನು ಪರಿಸ್ಥಿತಿ ಉಂಟಾಗುತ್ತಿತ್ತು ಎನ್ನುವ ವಿಷಯವಲ್ಲಿ ಅನೇಕರು ಇಲ್ಲಿ ಮಾತನಾಡಿದ್ದಾರೆ. ಈ ಹಿಂದೆ ಆಂಧ್ರ ರಾಜ್ಯ ಸ್ಥಾಪನೆಯಾದ ಸಂದರ್ಭದಲ್ಲಿ ಕರ್ನೂಲನ್ನು ರಾಜಧಾನಿಯನ್ನಾಗಿ ಮಾಡುವ ಸಂದರ್ಭದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಕಟ್ಟಡಗಳನ್ನೂ ರೆಸಿಡೆನ್ಷಿಯಲ್ ಕ್ವಾರ್ಟರ್ಸ್‌ಗಳನ್ನೂ ಕಟ್ಟಲು ವೆಚ್ಚ ಮಾಡಿದರು. ಈಗ ಹೈದರಾಬಾದು ರಾಜಧಾನಿಯಾಯಿತು. ಅಲ್ಲಿ ಕಟ್ಟಿದ್ದ ಕಟ್ಟಡಗಳು ಈಗೇನಾಗಿವೆಯೋ ಗೊತ್ತಿಲ್ಲ.

ಕೆಲವರು ಇಂತಹ ಒಂದು ಕಟ್ಟಡವಿಲ್ಲದಿದ್ದರೆ ಏನಾಗಿತ್ತು ಮತ್ತು ಇಷ್ಟು ದುಬಾರಿ ವೆಚ್ಚದಲ್ಲಿ ಸರಿಯಾದ ಅಂದಾಜಿಲ್ಲದೆ ಏಕೆಕಟ್ಟಬೇಕಾಗಿತ್ತು ಎಂಬ ಆರೋಪಣೆ ಮಾಡಿದರು. ನಿವೃತ್ತ ಚೀಫ್ ಇಂಜಿನಿಯರುಗಳ ಸಮಿತಿ ಒಪ್ಪಿದ ಮೂಲ ನಕ್ಷೆಯರೀತಿಯಾಗಿ ವಿಧಾನಸೌಧವನ್ನೂ ನಿರ್ಮಾಣಮಾಡಲಾಗಿದೆ. ತಮಗೆ ಪ್ಲಾನನ್ನು ತೋರಿಸಿಲ್ಲ ಎಂಬ ಸ್ವಾಭಿಮಾನದ ಕೋಪವನ್ನು ಶ್ರೀ ನರಸಿಂಹಯ್ಯನವರು (ನಿವೃತ್ತ ಚೀಫ್ ಇಂಜಿನಿಯರು ಹಾಗೂ ವಿಚಾರಣಾ ಸಮಿತಿಯ ಸದಸ್ಯರು) ನನ್ನ ಮೇಲೆ ತೋರಿಸಿದ್ದಾರೆ. ಪ್ರತಿಯೊಂದು ಅಂದಾಜನ್ನು ತಯಾರುಮಾಡಿ ಅದನ್ನು ಪರಿಶೀಲಿಸಿ ಮಂಜೂರಾದ ಅನಂತರ ಕೆಲಸ ಆರಂಭಿಸುವ ಮಾರ್ಗವನ್ನು ಅನುಸರಿಸಿದ್ದರೆ ಈ ಕಟ್ಟಡ ಇನ್ನೂ 8-10 ವರುಷಗಳಾಗಿದ್ದರೂ ಮುಗಿಯುತ್ತಿರಲಿಲ್ಲ. ಈ ಭವನದ ನಿರ್ಮಾಣದಿಂದ ಸರ್ಕಾರ ಸಾಲದ ಹಣಕ್ಕೆ ಬಡ್ಡಿಕೊಡಬೇಕಾಗಿ ಬಂದಿದೆ ಎಂದು ಒಂದು ಆರೋಪಣೆ. ಇದು ಹೇಗಿದೆ ಎಂದರೆ: ಗಂಡ ಹೆಂಡತಿ ಇದ್ದರಂತೆ. ಆ ಗಂಡ ಒಂದು ದಿನ ತನ್ನ ಹೆಂಡತಿಯ ಹತ್ತಿರ ಬಂದು ಈ ವಾರ ನಾನು ಎರಡೂವರೆ ಸಾವಿರ ರೂಪಾಯಿಗಳನ್ನು ಮಿಗಿತಾಯ ಮಾಡಿದ್ದೇನೆ ಎಂದು ಹೇಳಿದನಂತೆ. ಇದನ್ನು ಕೇಳಿ ಹೆಂಡತಿಗೆ ಬಹುಸಂತೋಷವಾಯಿತು. ಇದಕ್ಕೆ ಕಾರಣವನ್ನು ಕೇಳಿದಾಗ ಅವಳ ಗಂಡ ಸುಮಾರು ಒಂದೂವರೆ ಸಾವಿರ ರೂಪಾಯಿ ಬೆಲೆ ಬಾಳುವಂತಹದು ಒಂದು ಚಿನ್ನದ ಉಡ್ಡಿಗೆ ಬೇಡ ಎಂದು ಹೇಳಿದ್ದಕ್ಕಾಗಿ, 200 ರೂಪಾಯಿ

(ಶ್ರೀ ಕೆ. ಹನುಮಂತಯ್ಯ).

ಗಳು ಬಾಳುವ ಸೀರೆಯನ್ನೂ ಬೇಡ ಎಂದು ಹೇಳಿದ್ದಕ್ಕಾಗಿ ಮತ್ತು ಇನ್ನೂ ಕೆಲವು ಒಡವೆಗಳು ಬೇಡವೆಂದದ್ದಕ್ಕಾಗಿ, ಈ ರೀತಿ ಎರಡೂವರೆ ಸಾವಿರ ರೂಪಾಯಿ ಉಳಿತಾಯವಾಯಿತು, ಎಂದು ಹೇಳಿದನಂತೆ. ಈ ಭವನ ನಿರ್ಮಾಣವಾಗದಿದ್ದರೆ ಹೆಚ್ಚು ಬಾಡಿಗೆಯನ್ನು ಸರ್ಕಾರ ಕೊಡಬೇಕಾಗಿ ಬರುತ್ತಿತ್ತು ಎಂಬ ವಿಷಯ ಈ ಅರವತ್ತು ವರ್ಷದ ಅರುಳು ಮರುಳು ಮನಸ್ಸಿಗೆ ಹೊಳೆಯಲಿಲ್ಲವೇ? ಈ ವಿಧವಾದ ಮನಸ್ಸಿನಿಂದ ಒಂದು ಆರೋಪವನ್ನು ಮಾಡಿದ್ದಾರೆ. ಇದನ್ನು ಪರೀಕ್ಷೆಮಾಡಿಲ್ಲ. ಪರೀಕ್ಷೆಮಾಡದೆ ಒಂದು ದೊಡ್ಡ ರಿಮಾರ್ಕ್ಸ್‌ನ್ನು ಪಾಸುಮಾಡಿದ್ದಾರೆ. ಈ ಕಟ್ಟಡಕ್ಕೆ ತಗಲಿದ ವೆಚ್ಚ ಸುಮಾರು 180 ಲಕ್ಷ ರೂಪಾಯಿಗಳನ್ನು ಹೇಗೆ ಒದಗಿಸಿದರು ಎಂದು ಆರೋಪಣೆ ಮಾಡಿದ್ದಾರೆ. ಈ ವರದಿಯಲ್ಲಿ "Where do you get this amount of 180 lakhs of rupees" ಎಂಬ ಪ್ರಶ್ನೆ ಇದೆ. ಇದನ್ನು ಸರಿಯಾಗಿ ಎಕ್ಸಾಮಿನ್ ಮಾಡದೆ ಈ ರೀತಿ ಹೇಳಿರುವುದು ತಪ್ಪು. ಪರೀಕ್ಷೆಮಾಡಿದ್ದರೆ ತಾನೇ ತಾನಾಗಿ ತಿಳಿಯುತ್ತಿತ್ತು. ಈಗ ಪಂಚವಾರ್ಷಿಕ ಯೋಜನೆಯ ಪ್ರಾಜೆಕ್ಟುಗಳಿಗೆ ಸುಮಾರು ಎಂಟು ಕೋಟಿ ನಿಗದಿಯಾಗಿತ್ತು. ಈಗ 5 ಕೋಟಿ ರೂಪಾಯಿಗಳ ಮೇಲೆ ಖರ್ಚಾಗಿದೆ. ಇದರಿಂದ ಹಣವನ್ನು ತೆಗೆದು ಕೊಂಡು ಈ ಕಟ್ಟಡವನ್ನು ಕಟ್ಟಲಿಲ್ಲ. ಈಗ ಆಗಿರತಕ್ಕ ಪಂಚವಾರ್ಷಿಕ ಯೋಜನೆಯ ಕಾರ್ಯಕ್ಕೆ ಅಡ್ಡಿಯಾಗಿದೆ ಎಂದು ಹೇಳಿದ್ದಾರೆ. ಈ ಪಂಚವಾರ್ಷಿಕ ಯೋಜನೆಯಲ್ಲಿದ್ದ, ಭದ್ರ, ನುಗು, ತುಂಗಾ ಮತ್ತು ಇನ್ನೂ ಏನೇನು ಇತರ ಪ್ರಾಜೆಕ್ಟುಗಳಿದ್ದುವೋ ಅವು ನಡೆಯುತ್ತಲೇ ಇದ್ದು ಅವಕ್ಕೆ ನಿಗದಿಯಾದ ಖರ್ಚು ವೆಚ್ಚ ವಾಗುತ್ತಲೇ ಇದೆ. ಯಾವ ರೀತಿಯಾದ ಅಡಚಣೆಗಳೂ ಆಗಿ ಕೆಲಸ ನಿಂತಿಲ್ಲ. ಪ್ರತಿಯೊಂದು ಪಂಚವಾರ್ಷಿಕ ಯೋಜನೆಯ ಪ್ರಾಜೆಕ್ಟಿನ ಫಿಗರ್ಸ್‌ನ್ನೂ ತೆಗೆದು ನೋಡಿದರೆ ಈ ವರ್ಕ್ಸ್ ವಿಷಯದಲ್ಲಿ ಸರ್ಕಾರ ಹೇಗೆ ಕೆಲಸಮಾಡಿದೆ, ಹಣ ಹೇಗೆ ಉಪಯೋಗವಾಗಿದೆ ಎನ್ನುವುದು ಗೊತ್ತಾಗುತ್ತದೆ. ಯಾವಾಗಲೂ ಸತ್ಯ ವನ್ನು ಆಡಬೇಕು. ತಾವು ಪರಿಶೀಲನೆ ಮಾಡುವಾಗ ಮನೆಯಲ್ಲಿ ಕುಳಿತು ಈ ವಿಷಯದಲ್ಲಿ ಏನೂ ಡೆವೆಲೆಪ್‌ಮೆಂಟು ಆಗಿಲ್ಲ ಎಂದು ಹೇಳತಕ್ಕದ್ದು ಸರಿಯಾದ ದ್ದಲ್ಲ. ಆ ನಮಿತ ಇದನ್ನೇ ದೊಡ್ಡದು ಮಾಡಿ ಆರೋಪ ಣೆಯನ್ನು ಮಾಡಿದೆ.

Even today, if you examine the various projects under the First and the Second Five-Year Plans we will find that every project has proceeded according to Plan and the necessary funds are being furnished. ಸ್ವಾಮಿ, ಈಗ ಇನ್ನು ಹೆಚ್ಚಿನ ವಿಷಯಗಳನ್ನು ಈ ಸಭೆಗೆ ಅರಿಕೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಇದೇ ರಿಪೋರ್ಟಿನಲ್ಲಿರುವ ಇತರ ವಿಷಯಗಳನ್ನು ಚರ್ಚಿಸುವುದಕ್ಕೆ ಅವಕಾಶವಿಲ್ಲ. ನ್ಯಾಯವಾಗಿರುವುದನ್ನು ಹೇಳದೆ ಈ ರಿಪೋರ್ಟನ್ನೇ ಹೇಗೆ ದೊಡ್ಡದುಮಾಡಿ ಆರೋಪಿಸಿದ್ದಾರೆಂಬುದನ್ನು ಪ್ರಾಸಂಗಿಕವಾಗಿ ಈ ಸಭೆಯಲ್ಲಿ ನಿಮ್ಮ ಅವಗಾಹನೆಗಾಗಿ ತಂದಿದ್ದೇನೆ. ಈ ವರದಿಯಲ್ಲಿ ಅನೇಕ ಅಧಿಕಾರಿಗಳಮೇಲೆ ಆರೋಪಣೆಗಳಿರುವುದ ರಿಂದ ಈ ವರದಿಯನ್ನು ಪ್ರಕಟಿಸದೆ ಇದ್ದ ನಂದರ್ಭದಲ್ಲಿ ನಾನೇ ಹೋಗಿ ಇದನ್ನು ಪ್ರಕಟಿಸಬೇಕೆಂದು ಒತ್ತಾಯ ಮಾಡಿದೆನು. ಶ್ರೀಮಾ ನಿಜಲಿಂಗಪ್ಪ ಅವರನ್ನು ಒಮ್ಮತದಿಂದ ಮುಖ್ಯ ಮಂತ್ರಿಗಳಾಗಿ ಚುನಾವಣೆ ಯಾಗಲು ನಮ್ಮ ಪಕ್ಷದ ಗುರಿಯಂತೆ ನನ್ನ ಅಳಿಲು ಸೇವೆಯನ್ನು ಮಾಡಿ ನಾನೂ ಸಹಾಯಮಾಡಿದೆ. ಆದರೆ ಮುಖ್ಯಮಂತ್ರಿಗಳಾದ ದಿವನದಿಂದ ನನ್ನೊಂದಿಗೆ ಮಾತನಾಡುವುದಕ್ಕೆ ಕೂಡ ಅವರಿಗೆ ಮನಸ್ಸಿಲ್ಲ. ಅನಂತರ ಒಮ್ಮೆ ಫೋನಿನಲ್ಲಿ ಮಾತನಾಡಿಸಿದರೂ ನನ್ನೊಡನೆ ಮಾತನಾಡಲಿಲ್ಲ. ನಮ್ಮ ಇಂಜಿನಿಯರುಗಳು ಏನು ಸಮಾಧಾನ ಹೇಳುತ್ತಾರೋ ಆ ಸಮಾಧಾನವನ್ನು, ಈ ಆರೋಪಣೆಗಳ ಮಗ್ಗುಲಲ್ಲಿ ಒಂದೊಂದು ಪಬ್ಲಿಷ್‌ಮಾಡುವುದು ಅವಶ್ಯಕ; ಇಂಜಿನಿಯರುಗಳ ಸಮಾಧಾನವನ್ನು ತೆಗೆದು ಕೊಂಡು ಅನಂತರ ಅವರು ಮಾಡಿರುವುದು ತಪ್ಪೋ ಸರಿಯೋ ಎಂಬುದನ್ನು ನಿರ್ಧರಿಸಿಕೊಳ್ಳಿ ಎಂದು ಹೇಳಿದೆ. ಅವರಿಗೆ ನನ್ನ ಪ್ರಾರ್ಥನೆಯ ಮೇಲೆ ಕರುಣೆಯುಂಟಾಗಲಿಲ್ಲ. ಹಿಂದೆ ಹೇಳಿದ ಹಾಗೆ, ನಾನು ಯಾರನ್ನೂ ಆಕ್ಷೇಪಣೆ ಮಾಡುವುದಿಲ್ಲ. ಗ್ರಹಗತಿ ಚೆನ್ನಾಗಿಲ್ಲದಿದ್ದರೆ ಹೀಗಾಗುತ್ತದೆ ಎಂದು ಸಮಾಧಾನಪಟ್ಟುಕೊಳ್ಳುತ್ತೇನೆ. ಈ ರೀತಿಯಾಗಿ ಕಷ್ಟಪಟ್ಟು ಕೆಲಸಮಾಡಿದಂಥ ಇಂಜಿನಿಯರುಗಳ ಮೇಲೆ ಆರೋಪಣೆಗಳ ಸುರಿಮಳೆ ಮಾಡಿ ಅವರು ಏನು ಹೇಳುತ್ತಾರೋ ಅದನ್ನು ಪ್ರಕಟಿಸದೆ ಹೋದರೆ ನಿಷ್ಪಕ್ಷಪಾತ ಭಾವನೆಯಾಗುವುದಿಲ್ಲ; ನಿಷ್ಪಕ್ಷಪಾತ ವರ್ತನೆಯಾಗುವುದಿಲ್ಲ.

These members of the Committee have driven out many of these Engineers.

ಇಂಜಿನಿಯರುಗಳು ತಾವು ಇಂಥಿಂಥವರು ಹೋಗಿದ್ದೆವು ಎಂದೂ, explanation ಕೊಡುವುದಕ್ಕೆ ಹೋದರೆ 'ಅದನ್ನು ಬರೆದುಕೊಳ್ಳುವುದಕ್ಕಾಗುವುದಿಲ್ಲ. Say, 'yes or no.' ಎಂದು ಹೇಳಿದರೆಂದೂ ತಿಳಿದು ಬಂದಿದೆ.

They have behaved more like overlords than like impartial judges who are interested in ascertaining the truth.

ಈ ಇಂಜಿನಿಯರುಗಳಿಗೆ ಸ್ಟೇಟ್‌ಮೆಂಟ್‌ಗಳನ್ನು ಬರೆದುಕೊಡಿ ಎಂದು ನಾನು ಹೇಳಿದೆ. ಅವರಿಗೆ ಎಷ್ಟು ಭಯವುಂಟಾಗಿದೆ ಎಂದರೆ, ನನ್ನ ಹತ್ತಿರ ಬಂದರೆ ನಮ್ಮ ಮನೆ ಮುಂದೆ C.I.D ಗಳನ್ನು ಹಾಕಿರುವುದರಿಂದ ಬರುವುದಿಲ್ಲವೆಂದು ಹೇಳುತ್ತಾರೆ. ನನ್ನ ಮನೆಯ ಮುಂದೆ ನಾನು ಎಷ್ಟೋ ಸಲ ಪರೀಕ್ಷೆ ಮಾಡಿದ್ದೇನೆ, ಮನೆಯ ಎದುರುಗಡೆ ಒಂದು compound wall ಇದೆ. ಅಲ್ಲಿ ಪ್ರತಿದಿನವೂ ಒಬ್ಬಿಬ್ಬರು C.I.D. ಗಳು ಇರುತ್ತಾರೆ. ಅವರಿಗೆ ಹಿಂದಿನಿಂದಲೂ ಇದ್ದ ಸ್ವಾಮಿಭಕ್ತಿ ಇದೆ. ನನ್ನನ್ನು ನೋಡಿದ ಕೂಡಲೇ ಎದ್ದು ನಮಸ್ಕಾರ ಮಾಡುತ್ತಾರೆ. ಮಂತ್ರಿಗಳಾಗಲಿ, ಮುಖ್ಯ ಮಂತ್ರಿಗಳಾಗಲಿ ಹೀಗೆ ಮಾಡಿದ್ದಾರೆಂದು ನಾನು ಆರೋಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಇದನ್ನು ಯಾರು ಮಾಡಿದ್ದಾರೆಯೋ ನನಗಾದರೂ ಗೊತ್ತಿಲ್ಲ. ಆದರೆ ಅಲ್ಲಿ ನಡೆಯತಕ್ಕ ವಿದ್ಯಮಾನಗಳು ಹೀಗಿವೆ. ರಾಜಕೀಯದಲ್ಲಿಯೂ ಅಷ್ಟೆ ನಾನು ಎಲ್ಲಿಗಾದರೂ ಹೋದರೆ ನನ್ನ ಅನೇಕ ಮಾನ್ಯ ಸ್ನೇಹಿತರೇ ಮಾತನಾಡುವುದಕ್ಕೆ ಬರುವುದಿಲ್ಲ. ಅದು ಯಾರ ಏರ್ಪಾಡೋ ಗೊತ್ತಾಗುವುದಿಲ್ಲ. ಬೀದಿಯಲ್ಲಿರುವ ಜನರು, ಕಾಂಗ್ರೆಸ್ಸೇತರರು ಹೂವಿನಹಾರ ಹಾಕುತ್ತಾರೆ. ಆದರೆ ನಮ್ಮವರೇ ಮಾತನಾಡುವುದಿಲ್ಲ. ನಾನು 25 ವರ್ಷಗಳಿಂದಲೂ ಕೈಲಾದ ಸೇವೆಯನ್ನು, ಸೆಂಟ್ರಲ್‌ಜೈಲಿನಿಂದ ಹಿಡಿದು ಅತಾರಾಕಚೇರಿಯವರೆಗೂ, ಮಾಡಿದ್ದೇನೆ. ಈ ಒಂದು ವಾತಾವರಣ.

ವೇನಿದೆಯೋ ಅದು ವಿಷಮಯ, ಪೋಸಮಯ ವಾತಾವರಣವಾಗಿದೆ. ಕೀಗಾಗಿರುವುದನ್ನು ಹಿಂದೆಂದೂ ನೋಡಿರಲಿಲ್ಲ. ಈ ಒಂದು ವಿಷಮಯ ವಾತಾವರಣದಲ್ಲಿ ಹುಟ್ಟಿದ ಶಿಶು ಈ ವರದಿ. ಈ ವರದಿಯನ್ನು ನಂಬುವುದಕ್ಕಿಂತ ಮೊದಲು, ಒಂದಂಶವನ್ನು ಗಮನಿಸಬೇಕೆಂದು ಈ ಸಭೆಯಲ್ಲಿ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. ಆಗ ಚೀಫ್ ಇಂಜಿನಿಯರ್ ಆಗಿದ್ದ ಶ್ರೀ ಗಂಗಾಧರ್ ಅವರೂ, ಶ್ರೀ ಅನಂತಾಚಾರ್ ಅವರೂ, ಇದ್ದರು. ಮತ್ತು ಎಕ್ಸಿಕ್ಯೂಟಿವ್ ಇಂಜಿನಿಯರುಗಳು ಯಾರಿದ್ದರೋ ಅಸಿಸ್ಟೆಂಟ್ ಇಂಜಿನಿಯರುಗಳು ಯಾರಿದ್ದರೋ ಇವರೆಲ್ಲರೂ ಆರೋಪಣೆಗಳಿಗೆ ಏನು ಸಮಾಧಾನ ಹೇಳುತ್ತಾರೆಯೋ ಅದನ್ನು ಬರವಣಿಗೆಯಲ್ಲಿ ಕೊಡಿ ಎಂದು ಕೇಳಿ. ಈ ವರದಿಯಾದರೂ ಕೂಡ ಈ ಸಭೆಯ ನಿಯಮಗಳ ಪ್ರಕಾರ ರಚಿತವಾದ ಎಸ್ಟಿಮೇಟ್ಸ್ ಕಮಿಟಿಯವರ ವರದಿಯ ನಲಹೆಗೆ ಅನುಗುಣವಾಗಿರುವುದು. ಆದ್ದರಿಂದ ಈ ಸಭೆಯಲ್ಲಿ ಹೇಳುತ್ತೇನೆ. ಈ ಸಭೆಯವರು ನಿಷ್ಪಕ್ಷಪಾತವಾಗಿ ತೀರ್ಮಾನ ಮಾಡಬೇಕೆಂಬ ಭಾವನೆ ಇರತಕ್ಕವರು. All the technical details I do not know. I am a layman. ಆದುದರಿಂದ ನಾನು ಅದರ ಅಂಶಗಳನ್ನು ಪ್ರಸ್ತಾಪಿಸಿ ಒಂದು ಸಮಾಧಾನದ ಉತ್ತರ ಕೊಡುವುದಕ್ಕೆ ಈ ದಿವಸ ನನಗೆ ಆ ಶಕ್ತಿ ಇಲ್ಲ. ಆ ಕಮಿಟಿಯವರು ಯಾವ ಯಾವುದನ್ನು ಬರೆದುಕೊಳ್ಳುವುದಿಲ್ಲವೆಂದು ನಿರಾಕರಿಸಿದ್ದಾರೋ ಅವೆಲ್ಲವನ್ನೂ ಬರವಣಿಗೆಯಲ್ಲಿ ಕೊಡಿ ಎಂದು ಹೇಳಿ, ನರ್ಕಾರದವರು ಅದನ್ನು ತೆಗೆದುಕೊಂಡು, ಮುದ್ರಿಸಿ ಈ ಸಭೆಗೆ ಹಂಚಿ ಆಮೇಲೆ ತೀರ್ಮಾನ ಮಾಡಬೇಕು.

ಕೊನೆಯ ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ವರದಿಯಲ್ಲಿ "Military trucks ತೆಗೆದುಕೊಂಡಿದ್ದಾರೆ; ಅದು ಅಕ್ರಮವಾದದ್ದು" ಎಂದು ಬರೆದಿದ್ದಾರೆ. ಇದು ಬಹಳ ದಿವಸಗಳಿಂದ ವಿವಾದದಲ್ಲಿದೆ. ನಮ್ಮ ಪಕ್ಷದ ಅನೇಕ ಮಹನೀಯರು ನಮ್ಮ ಪಕ್ಷದ ದೊಡ್ಡವರಿಗೆ "ಅನ್ಯಾಯಗಳಾಗಿವೆ" ಎಂದು ಬರೆದರು. ಇದಾಗಿ ಎರಡು ವರ್ಷಗಳಾಗಿವೆ. ನಾನು ಹೇಳಿದುದನ್ನೂ ಅವರು ಹೇಳಿದುದನ್ನೂ, ನರ್ಕಾರದವರು ಹೇಳಿದುದನ್ನೂ ಕೇಳಿ ಎಲ್ಲವನ್ನೂ ಪರಿಶೀಲನೆಮಾಡಿ, ಅವರು "ಈ transaction ನರ್ಕಾರದ ಹಣವನ್ನುಳಿಸಿದೆ, ದುರ್ವ್ಯಯ ಮಾಡಿಲ್ಲ"ವೆಂದು ಬರೆದಿದ್ದಾರೆ. ಆ ಕಾಗದವನ್ನು ಎಂದಾದರೂ ಒಂದು ದಿವಸ ಪ್ರೊಡ್ಯೂಸ್ ಮಾಡುತ್ತೇನೆ. ಹೀಗೆ ಇಂಥ ಒಂದು transaction ಬಗ್ಗೆ ಒಬ್ಬ ದೊಡ್ಡ ವ್ಯಕ್ತಿ, ಇಂಡಿಯಾ ದೇಶಕ್ಕೆಲ್ಲ ಗೊತ್ತಿರತಕ್ಕ ವ್ಯಕ್ತಿ, ರಿಕಾರ್ಡುಗಳನ್ನು ನೋಡಿ ಈ transaction ನರ್ಕಾರದ ದುಡ್ಡು ಉಳಿಸಿದೆ ಎಂದು ಬರೆದಿದ್ದಾರೆ. ಅವರ ವಿಷಯದಲ್ಲಿ ಕೂಡ ಆರೋಪಣೆ ಮಾಡಿದ್ದಾರೆ. ಅದನ್ನು ನೋಡಿದರೆ ಅವರ ಮನಸ್ಸಿನ ಮಟ್ಟ ಎಲ್ಲಿಗೆ ಇಳಿದಿದೆ ಎಂದು ಕಾಣುತ್ತದೆ. ಇಷ್ಟು ಹೇಳಿದ್ದೇನೆ. ಇನ್ನು ಸಮಯ ಸಂದರ್ಭ ಬಂದಾಗ ಉಳಿದ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ.

The terms of reference to the Committee are :—

(i) to examine the state of accounts and to assess the present position ;

(ii) to scrutinise the expenditure on the building, having due regard to its nature, magnitude and purpose, and to examine the procedure adopted in fixing rates and executing works ; and

(iii) to examine the possibility of effecting economies in further expenditure on the work.

There everybody will see except two chapters of this Report, the rest of the Report goes outside the field of the terms of reference.

ಈ ವಿಧಾನ ಸೌಧವನ್ನು ಕಟ್ಟಿದ್ದನ್ನು ಕುರಿತು ಈ ಒಂದು ವಾರದಲ್ಲಿ ನನಗೆ ಸ್ನೇಹಿತರುಗಳಿಂದ ಸುಮಾರು 500 ಕಾಗದಗಳು ಬಂದಿವೆ. ಮತ್ತು ಹಿಂದೆ 800 ಕಾಗದಗಳು ಈ ಕೆಲಸವನ್ನು ಪ್ರಶಂಸೆಮಾಡಿ ಬಂದಿವೆ. ಅಮೇರಿಕದಿಂದ ಒಬ್ಬ ಮಿತ್ರರು ಸ್ವಯಂಪ್ರೇರಿತರಾಗಿ ಕಾಗದ ಬರೆದಿರುತ್ತಾರೆ. ಅದರಲ್ಲಿ ವಿಧಾನಸೌಧ ಕಟ್ಟಿರುವ ಜಾಗವೇ ಲಕ್ಷಣವಾಗಿದೆ ಎಂದು ಬರೆದಿರುತ್ತಾರೆ. ಈ ಮೂರು ಮಂದಿ ಸಮಿತಿಯ ಸದಸ್ಯರು "ಇದು ಚೆನ್ನಾಗಿಲ್ಲ, ಇದನ್ನು ಕಟ್ಟಬಾರದಾಗಿತ್ತು" ಎಂದರೆ ನನಗಾದರೂ ಒಂದುಸಲ ದಿಗ್ಭ್ರಮೆಯಾಗುತ್ತದೆ. ಇವರು ಏಕೆ ಇಷ್ಟುಮಂದಿ ಚೆನ್ನಾಗಿಲ್ಲವೆಂದು ತೆಗಳುತ್ತಾರೆ ಎಂಬಿನಿಸುತ್ತದೆ. "ದೇವರೇ ಅನ್ಯಾಯವೋ ನುನ್ಯಾಯವೋ ನಿನ್ನಾ್ಯಯವನು ನೀನೇ ಬಲ್ಲೆ" ಎಂದು ಕನಕದಾಸರು ಏನು ಹೇಳಿದ್ದಾರೆಯೋ ಅದನ್ನೇ ನಾನೂ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The House now rises and will meet tomorrow at 8-30 A.M.

The House adjourned at Twenty Minutes past Five of the Clock, to meet again at Thirty Minutes past Eight of the Clock on Saturday, the 23rd March, 1957.

WD 2286—GPB—900—24-5-57